ಡಾ। ಶಿವರಾಮ ಕಾರಂತ ಸಂಸ್ಮರಣ
ಯಕ್ಷಗಾನ ಪ್ರಸಂಗ ಮಾಲಿಕೆ

ಸಂಪುಟ ೧೫



ಕಿರಿಯ ಬಲಿಪ ನಾರಾಯಣ ಭಾಗವತರ ಕೃತಿಗಳು

Scanned by CamScanner

ಡಾ। ಶಿವರಾಮ ಕಾರಂತ ಸಂಸ್ಮರಣ

ಯಕ್ಷಗಾನ ಪ್ರಸಂಗ ಮಾಲಿಕೆ

ಸಂಪುಟ ೧೫

ಕಿರಿಯ ಬಲಿಪ ನಾರಾಯಣ ಭಾಗವತರ ಕೃತಿಗಳು

ಪ್ರಕಾಶಕರು :

ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ
೧೯೯೮

Scanned by CamScanner

ಡಾ। ಶಿವರಾಮ ಕಾರಂತ ಸಂಸ್ಮರಣ ಯಕ್ಷಗಾನ ಪ್ರಸಂಗ ಮಾಲಿಕೆ
ಕಿರಿಯ ಬಲಿಪ ನಾರಾಯಣ ಭಾಗವತರ ಕೃತಿಗಳು

ಸಂಪುಟ ೧೫

೧೯೯೮

ಪ್ರಕಾಶಕರು : ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ

ಬೆಲೆ : ರೂ 60.00

ಮುದ್ರಕರು : ಯುಗಪುರುಷ ಮುದ್ರಣಾಲಯ
ಕಿನ್ನಿಗೋಳಿ
ದೂರವಾಣಿ : 725423

ಮುನ್ನುಡಿ

ಹಿರಿಯ ಭಾಗವತ, ಪ್ರಸಂಗ ಕರ್ತೃ ಶ್ರೀ ಬಲಿಪ ನಾರಾಯಣ ಭಾಗವತರ ಐದು ಪ್ರಸಂಗಗಳು ಈ ಸಂಪುಟ ಮೂಲಕ ಪ್ರಕಾಶಿತವಾಗುತ್ತಿರುವುದು ತುಂಬ ಸಂತೋಷದ ಸಂಗತಿ. ಯಕ್ಷಗಾನ ಪ್ರಸಂಗ ಸಹಿತ ಪ್ರಕಾಶನದ ಮೂಲಕ ಎಪ್ಪತ್ತಕ್ಕೂ ಮಿಕ್ಕಿದ ಕೃತಿಗಳನ್ನು ಸಂಕ್ಷೇಪಿಸಿ ಒಂದು ಚರಿತಾರ್ಥ ಸಾಧನೆಗೈದಿರುವ ಪದವೀಧರ ಯಕ್ಷಗಾನ ಸಮಿತಿಯ ಶ್ರೀ ಎಚ್.ಬಿ.ಎಲ್. ರಾವ್ ಮತ್ತು ಗೆಳೆಯರು, ಈ ಮೂಲಕ ಯಕ್ಷಗಾನ ಕ್ಷೇತ್ರಕ್ಕೆ ಬೆಲೆಯುಳ್ಳ ಮತ್ತೊಂದು ಕೊಡುಗೆಯನ್ನು ನೀಡಿದ್ದಾರೆ.

ಶ್ರೀ ಬಲಿಪ ನಾರಾಯಣ ಭಾಗವತರು ಯಕ್ಷಗಾನದ ಓರ್ವ ಅಗ್ರಮಾನ್ಯ ಭಾಗವತರು. ತೆಂಕುತಿಟ್ಟು ಯಕ್ಷಗಾನದ ಸಂಪ್ರದಾಯಗಳ ಕುರಿತು ಬಹಳಷ್ಟು ತಿಳಿದಿರುವ ಮತ್ತು ಪ್ರಯೋಗಿಸಿ ತೋರಬಲ್ಲ ತಜ್ಞ ಕಲಾವಿದರು. ತನ್ನ ಅಜ್ಜ ಹಿರಿಯ ಬಲಿಪ ನಾರಾಯಣ ಭಾಗವತರಿಂದ ಬಂದ, ಯಕ್ಷಗಾನದ ಪರಂಪರೆಯ ಶೈಲಿಯ ಒಂದು ವಿಧಾನವನ್ನು ನಿಷ್ಠೆಯಿಂದ ಉಳಿಸಿಕೊಂಡು ಬಂದವರು. ಇದೀಗ ಕಾಣಿಸಿಕೊಂಡಿರುವ ಹಲವು ಹಾಡುಗಾರಿಕೆಗಳಿಂದ, ಮಾಧ್ಯಮಗಳಿಂದ ಉಂಟಾದ ಪ್ರಭಾವಗಳಿಗೆ ತಲ್ಲಣಗೊಳ್ಳದೆ, ಅಚಲರಾಗಿ ನಿಂತು ತನ್ನದೆ ಆದ ದಾರಿಯಲ್ಲಿ ಮುಂದುವರಿಯುತ್ತಿರುವ ಧೀರ ಕಲಾವಿದ. ತಾಳ, ರಾಗ, ಛಂದಸ್ಸು ಮತ್ತು ರಂಗದ ಗಾನದ ಅಪೇಕ್ಷೆಗಳನ್ನು ಸಮನ್ವಯಗೊಳಿಸಿಕೊಂಡು ಹಾಡುವ, ಆಟಗಳನ್ನಾಡಿಸಿ ತೋರಿಸುವ ಸಮರ್ಥ. ಇಂತಹ ಓರ್ವ ಸರ್ವಾಂಗ ಪರಿಣತನಾದ ಭಾಗವತರು ರಚಿಸಿದ ಪ್ರಸಂಗಗಳೆಂದ ಮೇಲೆ ಅವುಗಳ ಗುಣಮಟ್ಟದ ಕುರಿತು ಹೇಳಬೇಕಾದುದಿಲ್ಲ.

ಸುಮಾರು ಇಪ್ಪತ್ತೈದು ಪ್ರಸಂಗಗಳನ್ನು ಬರೆದು ಯಕ್ಷಗಾನ ಸಾಹಿತ್ಯಕ್ಕೆ ಕೊಡುಗೆ ಸಲ್ಲಿಸಿರುವ ಭಾಗವತರ, ಐದು ಪ್ರಸಂಗಗಳು ಈ ಸಂಪುಟದಲ್ಲಿದೆ. ಗರುಡೋದ್ಭವ, ಮತ್ಸ್ಯಾವತಾರ, ನವಗ್ರಹ ಮಹಾತ್ಮೆ, ದೇವಾಂಗ ಮದನಿಕೆ, ಕಂತುಕಾವತೀ ಪರಿಣಯ - ಇವು ಇಲ್ಲಿನ ಐದು ಪ್ರಸಂಗಗಳು. ಈ ಎಲ್ಲಾ ಪ್ರಸಂಗಗಳ ಆಕರಗಳು ಪುರಾಣಗಳು, ಪೌರಾಣಿಕವಾದ ವಸ್ತುವನ್ನು ಅಷ್ಟಷ್ಟು ಹೊಂದಿಸಿ ರಂಗಕ್ಕೆ ಅಳವಡುವಂತೆ ರಚಿಸಿರುವ ಈ ಪ್ರಸಂಗಗಳು ನಮ್ಮ ಸಾಂಪ್ರದಾಯಿಕ ಪ್ರಸಂಗಗಳ ಮುಂದುವರಿಕೆಗಳಾಗಿವೆ.

ಯಕ್ಷಗಾನ ಪ್ರಸಂಗ ಸಾಹಿತ್ಯವು ಹಲವು ಮುಖಗಳಿಂದ ಬೆಳೆಯುತ್ತಿದೆ. ಪೌರಾಣಿಕ ವಸ್ತುವನ್ನಾರಿಸಿ ಹಳೆಯ ಕ್ರಮದಲ್ಲೆ, ಒಂದಿಷ್ಟು ಪರಿಷ್ಕಾರದೊಂದಿಗೆ ರಚಿಸುವ ಕ್ರಮ, ಪೌರಾಣಿಕ ವಸ್ತುವನ್ನು ಆಧುನಿಕ ಭಾವದಿಂದ ಅರ್ಥೈಸಿ ರಚಿಸುವ ಕ್ರಮ, ರಂಜನಾತ್ಮಕವಾಗಿ ಕಥಾ

Scanned by CamScanner

ಪ್ರಧಾನವಾಗಿ ರಚಿಸುವ ರೀತಿ - ಮೊದಲಾಗಿ ಹಲವು ಕವಲುಗಳು ಕಾಣಿಸಿಕೊಂಡಿವೆ. ಈ ಪೈಕಿ ಬಲಿಪ ಭಾಗವತರದ್ದು ಒಂದನೆಯ ದಾರಿ. ಇಷ್ಟೊಂದು ಹಳೆಯ ಪ್ರಸಂಗಗಳಿದ್ದರೂ ಪೌರಾಣಿಕ ಸಾಹಿತ್ಯದಲ್ಲಿ ಅದೆಷ್ಟೊ ಕಥಾನಕಗಳೂ ಇನ್ನೂ ಇದ್ದು, ಪ್ರಸಂಗ ರಚನೆಗೆ ವಿಪುಲವಾದ ವಸ್ತು ಲಭ್ಯವಿದೆ ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಈ ಐದೂ ಪ್ರಸಂಗಗಳು ಒಂದಕ್ಕಿಂತ ಒಂದು ಭಿನ್ನವಾಗಿದ್ದು, ಸೊಗಸಾಗಿ ರಚಿತವಾಗಿವೆ. ರಂಗದಲ್ಲಿ ಯಶಸ್ವಿಗಳಾಗಿವೆ. ಈ ಪೈಕಿ 'ದೇವಾಂಗ ಮದನಿಕೆ' ಪ್ರಸಂಗವು ಶ್ರೀ ಶೇಣಿ ಅವರ ಭೌಮಾಸುರನ ಪಾತ್ರದೊಂದಿಗೆ, ರಂಗದಲ್ಲಿ ಒಂದು ಹೊಸ ಸಾಧ್ಯತೆಯನ್ನು ಕಾಣಿಸಿ ಇತಿಹಾಸ ನಿರ್ಮಿಸಿದ ಪ್ರಸಂಗ.

ಈ ಪ್ರಸಂಗಗಳಲ್ಲಿ ರಂಗದೃಷ್ಟಿ ಇದೆ. ರಾಗ, ತಾಳ ವೈವಿಧ್ಯ ಇದೆ. ಯಕ್ಷಗಾನದ ವಿವಿಧ ಬಂಧಗಳ ಬಳಕೆ ಇದೆ. ಕಲ್ಪನೆ, ನಾವೀನ್ಯಗಳಿಗೂ ಅವಕಾಶ ನೀಡಲಾಗಿದೆ. ಯಕ್ಷಗಾನದ ವಿವಿಧ ವೇಷಗಳ ಬಳಕೆ 'ಕಾಲ'ಗಳ ಕಲ್ಪನೆ. ಸನ್ನಿವೇಶಾನುಕೂಲತೆ, ಪಾತ್ರವೈವಿಧ್ಯ, ಭಾವಗಳ ಸೂಕ್ತ ಪರಿವರ್ತನೆ ಮೊದಲಾದ ಆವಶ್ಯಕತೆಗಳನ್ನು ಈ ಪ್ರಸಂಗ ಪೂರೈಸುತ್ತದೆ. ರಂಗದ ಗಾಂಭೀರ್ಯವನ್ನು ಉಳಿಸಿಕೊಂಡು ಪ್ರದರ್ಶನ ನೀಡಲು ಸೂಕ್ತವಾಗಿದೆ. ವೈವಿಧ್ಯಕ್ಕಾಗಿ ಅನವಶ್ಯವಾದ ಕ್ಲಿಷ್ಟ ಬಂಧಗಳ ಬಳಕೆಯನ್ನು ಕವಿ ಮಾಡಿಲ್ಲ.

ಯಕ್ಷಗಾನದ ಸಂಪ್ರದಾಯವನ್ನುಳಿಸಿ ಒಳ್ಳೆಯ ಪ್ರದರ್ಶನಗಳನ್ನು ನೀಡಲು ಯೋಗ್ಯವಾಗಿರುವ ಈ ರಚನೆಗಳನ್ನು ನಮ್ಮ ವ್ಯವಸಾಯ ಮತ್ತು ಹವ್ಯಾಸಿ ಕಲಾ ಮಂಡಳಿಗಳು ಆದರಿಸಲಿ. ತನ್ಮೂಲಕ ಈ ಬಗೆಯ ಇನ್ನಷ್ಟು ರಚನೆಗಳಿಗೆ ಪ್ರೇರಣೆ ದೊರಕಲಿ.

ಇಂತಹ ಒಳ್ಳೆಯ ಸಂಪುಟವನ್ನು ನೀಡುತ್ತಿರುವುದಕ್ಕಾಗಿ ನನ್ನ ಆತ್ಮೀಯರೂ, ಯಕ್ಷಗಾನ ರಂಗದಲ್ಲಿ ಎತ್ತರದ ಸ್ಥಾನಕ್ಕೆ ಅರ್ಹರೂ ಆದ ಕವಿ ಮತ್ತು ಪ್ರಕಾಶಕರನ್ನು ಅಭಿನಂದಿಸುತ್ತೇನೆ.

ಡಾ.ಎಂ. ಪ್ರಭಾಕರ ಜೋಶಿ

ಮಂಗಳೂರು
ಶ್ರೀ ಕೃಷ್ಣಾಷ್ಟಮಿ
14.8.1998

ಸಂಪುಟ ೧೫

ಎರಡು ಮಾತು...

ಮುಂಬಯಿಯಲ್ಲಿ ಯಕ್ಷಗಾನ ಸಾಹಿತ್ಯ ಸಮ್ಮೇಳನಗಳು ನೆರವೇರಿದಾಗಲೆಲ್ಲ, ಅಪ್ರಕಟಿತ ಯಕ್ಷಗಾನ ಪ್ರಸಂಗಗಳನ್ನು ಸಂಗ್ರಹಿಸಿ ಪ್ರಕಟಪಡಿಸುವ ಸಂಪ್ರದಾಯ ನಡೆದು ಬಂದಿದೆ. ಇದುವರೆಗೆ 14 ಸಂಪುಟಗಳಲ್ಲಿ 70 ಕೃತಿಗಳು ಪ್ರಕಟವಾಗಿವೆ. ಈ ಬಾರಿ ನಾಲ್ಕು ಸಂಪುಟಗಳಲ್ಲಿ 21 ಕೃತಿಗಳು ಮುದ್ರಣವಾಗಿವೆ. ಯಕ್ಷಗಾನ ಸಂಬಂಧವಾದ ಇತರ 9 ಪುಸ್ತಕಗಳೂ ಸೇರಿ ಒಟ್ಟು ನೂರು ಕೃತಿಗಳು ಪ್ರಕಾಶನ ಗೊಂಡಿವೆ ಎನ್ನಲು ಸಂತೋಷವೆನಿಸುತ್ತದೆ. ಬಯಲಾಟ ಪ್ರದರ್ಶನಕ್ಕೆ ಒಪ್ಪುವ ವೀರ ರಸ ಪ್ರದಾನವಾದ 5 ಪ್ರಸಂಗಗಳು ಇದರಲ್ಲಿವೆ. ಇದನ್ನು ರಚಿಸಿಕೊಟ್ಟವರು ತೆಂಕುತಿಟ್ಟಿನ ಖ್ಯಾತ ಭಾಗವತ ಶ್ರೀ ಬಲಿಪ ನಾರಾಯಣ ಭಾಗವತರು. ಇದಕ್ಕೆ ಮುನ್ನುಡಿಯ ಸೇಸೆಯನ್ನಿಟ್ಟವರು ಯಕ್ಷಗಾನ ವಿದ್ವಾಂಸ ಡಾ| ಪ್ರಭಾಕರ ಜೋಷಿಯವರು. ಈ ಕೃತಿಗಳ ಹಸ್ತಪ್ರತಿಯನ್ನು ತಯಾರಿಸಿ ಕರಡು ತಿದ್ದಿದವರು ಯಕ್ಷಗಾನ ಕಲಾಪ್ರೇಮಿ ಮಂಗಳೂರಿನ ಎಸ್. ನಾರಾಯಣರು. ಅಂದವಾದ ಮುದ್ರಣದಲ್ಲಿ ಸಹಕರಿಸಿದವರು ಕಿನ್ನಿಗೋಳಿಯ ಯುಗಪುರುಷ ಮುದ್ರಣದ ಶ್ರೀ ಕೆ. ಭುವನಾಭಿರಾಮ ಉಡುಪ ಇವರು. ಈ ಆತ್ಮೀಯರಿಗೆ ನಮ್ಮ ಹೃತ್ಪೂರ್ವಕ ನಮನಗಳನ್ನು ಅರ್ಪಿಸುತ್ತೇವೆ.

- ಸಂಗ್ರಾಹಕ

Scanned by CamScanner

ಕಿರಿಯ ಬಲಿಪ ನಾರಾಯಣ ಭಾಗವತರ

ಪ್ರಸಂಗಗಳು :-

ಹೆಸರು :	ಪುಟ ಸಂಖ್ಯೆ :
1 ಅಮೃತಾಪಹರಣಂ ಯಾ ಗರುಡೋದ್ಭವ	1-34
2 ಕಂತುಕಾವತೀ ಕಲ್ಯಾಣ (ಮಿತ್ರ ಗುಪ್ತ ವಿಜಯ)	35-74
3 ನವಗ್ರಹ ಮಹಾತ್ಮೆ	75-104
4 ದೇವಾಂಗ ಮದನಿಕೆ ಯಾ ಕಾಳಿಂದಿ ವಿವಾಹ	105-134
5 ಮತ್ಸ್ಯಾವತಾರ ಮತ್ತು ಕೇತಕೀ ಶಾಪ	135-169

All Rights Reserved

ಸಂಪಾದಕರು : ಶ್ರೀ ಎಚ್. ಬಿ. ಎಲ್. ರಾವ್
M. A, L. L. B,

ಸಹಕಾರ : ಶ್ರೀ ಪಿ. ಶ್ರೀನಿವಾಸ ಭಟ್
ಶ್ರೀ ಕೆ. ಭುವನಾಭಿರಾಮ ಉಡುಪ

Publishers : Padaveedhara Yakshagana Samithi (R)
Plat No. 1012, Block No. A 3
R. P. Road, Mulund (west) Mumbai-400 080

Scanned by CamScanner

ಪಾತ್ರ ಪರಿಚಯ

ದೇವೇಂದ್ರ
ಅಗ್ನಿ
ವಾಯು
ದೇವರ್ಕಳು
ಕಶ್ಯಪ
ಕದ್ರು
ವಿನತೆ
ಅರುಣ
ವಾಸುಕಿ
ತಕ್ಷಕ
ಧನಂಜಯ
ಏಲಾಪತ್ರ
ಕಾರ್ಕೋಟಕ
ಸರ್ಪಾದಿಗಳು
ಬ್ರಹ್ಮ
ಮಹಾಶೇಷ
ಗರುಡ
ಮುನಿಗಳು

ಸೂರ್ಯ
ಚಂದ್ರ
ರಾಹು
ಕೇತು
ಲವಣಾಸುರ
ಬೇಹಿನಚರರು
ಮಕರಾಸುರ
ಕರ್ಕಟ ಕಮಠರು
ನಿಷಾಧರಾಜ
ಕಿರಾತರು
ಬ್ರಾಹ್ಮಣ
ಬ್ರಾಹ್ಮಣ ಪತ್ನಿ
ಬೃಹಸ್ಪತಿ
ರೇಣುಕ
ಸಿದ್ಧಸಾಧ್ಯರು
ವಿಶ್ವಕರ್ಮ
ವಿಷ್ಣು
ಸಪ್ತರ್ಷಿಗಳು

ಶಾರ್ದೂಲ ವಿಕ್ರೀಡಿತಂ

ಮಾಕಾಂತಂ ಯದುವೀರ ಕಂಸ ಹನನಂ ಭೀಮಾದಿಮೋದಪ್ರದಂ ।
ಶ್ರೀಕಂಠಂ ಸಖಿ ಕಾಮನಯ್ಯ ಸಕಲಾಧಾರಂ ಧರಾವಲ್ಲಭಂ ॥
ಸಾಕಾರಂ ಮಹಶೇಷಶಾಯಿ ವಿನತಾರೂಢಂ ದಯಾಸಾಗರಂ ।
ನಾಕೇಶಂ ವಿಧಿ ಮೌನಿವಂದ್ಯ ಸತತಂ ಗೋಪೀ ಜನಾರಾಧಕಂ ॥೧॥

ರಾಗ - ನಾಟಿ - ಝಂಪೆತಾಳ

ಜಯ ಜಯತು ಶ್ರೀಕಾಂತ । ಜಯತನಂತಾನಂತ ॥ ಜಯ ಜಯತು ವಂದಿತನೆ । ಜಯತು ಸ್ಥಿತಿಯುತನೆ ॥ ಜಯ ಜಯತು ಜಯತು ॥೧॥ ನಾನಾವತಾರಿ ಹರಿ । ದಾನವರ ಕುಲವೈರಿ ॥ ದೀನ ವಂಶೋದ್ಧಾರಿ । ಮಾನಯುತ ಶೌರಿ ॥ಜಯ ಜಯತು ಜಯತು ॥೨॥ ಹಂಸಗಮನನ ತಾತ । ಕಂಸಾದಿ ಖಳ ನಾಶ ॥ ಹಂಸಡಿಬಿಕರ ಘಾತ । ಹಂಸ ಯದುಪೋಷ॥ ಜಯ ಜಯತು ಜಯತು ॥೩॥

ವಾರ್ಧಿಕ್ಯ

ಗಣಪತಿಯ ಸಿರಿ ಗೌರಿ ಹರ ವಿಧಿಯ ಬಲಗೊಂಡು । ಜನತತಿಯ ಕವಿ ಜನರ ವಂದಿಸುತ ಕುಲದೈವ । ವನು ನೆನೆದು ಸೂತ ಶೌನಕರಿಗೊರೆದಿಹ ಅಮೃತವಪಹರಣ ಗೈದ ಕಥೆಯ ॥ ಅನುಗೊಳಿಸಿ ಕಾದ್ರವೇಯರ ವೈನತೇಯರೆಂ । ದೆನಿಪರ ಚರಿತ್ರಯಂ ಯಕ್ಷಗಾನದಿ ರಚಿಸಿ । ಗುಣದಿ ಜಗತಿಗೆ ಕೊಡುವೆ ಮನವರಿತು ಮನ್ನಿಪುದು ಲಾಲಿಸಿ ಪ್ರಸಂಗವನ್ನು ॥೧॥

ರಾಗ - ಭೈರವಿ - ಝಂಪೆತಾಳ

ಕೇಳಿರೈ ಶೌನಕರು । ಮೂಲೋಕದೊಡೆಯ ಸುರ । ಪಾಲನೋಲಗವಿತ್ತು । ಪೇಳಿದನು ಸಭೆಗೆ ॥೧॥ ತುಂಬುರರ ಗಾಯನವು । ರಂಭಾದಿಗಳ ನೃತ್ಯ । ಸಂಭ್ರಮಕೆ ಎಣೆಯುಂಟೆ । ಜಂಭಾರಿಗೆಣೆಯು ॥೨॥ ಸುರರೆಲ್ಲ ಕೇಳಿದಿರೆ । ಭರಿತ ಗರ್ವದಿ ಪಿಂತೆ । ಮರೆದಿರಲು ದುರ್ವಾಸ। ನೊರೆದ ಶಾಪದಲಿ ॥೩॥ ಸುರರ ಸಂಪದವಡಗಿ । ಶರಧಿಯೊಳಗಡಗಿರಲು । ದುರುಳರಾಳ್ಕಿಕೆ ದಿವದಿ । ಸ್ಥಿರವಾಯ್ತು ಕಡೆಗೆ ॥೪॥ ಅಳಿದುಳಿದ ಖಳರು ವರ । ಬಲದಿ ನಾಕದ ಭಾಗ್ಯ । ಕೆಳಸಿ ಬಂದರೆ ಸುರರೆ । ಒಳವ ತಿಳುಹೆಂದ ॥೫॥

Scanned by CamScanner

ಕಂದ

ಸುರವರನೆಂದುದ ಕೇಳ್ದಾ । ಗರಿತೆಲ್ಲವನಗ್ನಿ ವಾಯು ಮೊದಲಾದ್ಯಮರರ್ ॥ ಪರಿಪರಿ ಧೈರ್ಯದ ಮಾತ । ನ್ನೊರೆದರ್ ರಕ್ಕಸಥ ಭೀತಿಗೋಸುಗ ಭರದಿಂ ॥೧॥

ರಾಗ - ಭೈರವಿ - ಅಷ್ಟತಾಳ

ದಿವಿಜೇಂದ್ರ ಲಾಲಿಸಯ್ಯ । ಸಂಗರಕೆ ದಾ। ನವರು ಬಂದರೆ ಪಡೆಯ॥ತವಕದೊಳಿದಿರಿಸಿ ಜವನೂರ ತೋರ್ಪೆನು । ಸವರಿ ರಕ್ಕಸ ತತಿಯ ॥೧॥ ಶ್ರಮದಿ ಪಡೆದ ಭಾಗ್ಯಕೆ । ಬಯಸಿ ಖಳ। ರಮಿತರಯ್ತರೆ ಸ್ವರ್ಗಕೆ ॥ ಸುಮನಸ ನಾನ್ಯದಿ ಸಮರದೊಳಿದಿರಿಸಿ । ಯಮನ ಶಿಕ್ಷೆಯ ಕಾಣಿಪೆ ॥೨॥ ಅನಿಮಿಷರಿನಿತೆಂದುದ । ಕೇಳುತ ಶಕ್ರ । ಮನದಿ ಸಂತೋಷನಾದ ॥ ವನಜ ಸಂಭವ ಹರಿ ತ್ರಿಣಯರ ಧ್ಯಾನಿಸಿ । ಗುಣದಿಂದ ದಿವದೊಳಿರ್ದ ॥೩॥

ಕಂದ

ಸತಿ ಕದ್ರು ವಿನತೆಯರ ಮುನಿ । ಪತಿ ಕಶ್ಯಪ ಸೇವೆಗೊಂಡು ಮೆರೆದಿರೆ ತಪದೋಳ್ ॥ ಅತಿ ಹಿತನಾಗುತಲೀರ್ವರ । ನತಿ ವಿನಯದಿ ಕರೆದು ಪೇಳ್ದ ತನ್ನಭಿಮತವಂ ॥೧॥

ರಾಗ - ಕಲ್ಯಾಣಿ - ಅಷ್ಟತಾಳ

ಕಾಂತೆಯರಿರ ಕೇಳಿರೀಗ । ಮನ । ದಂತರ್ಯವೊರೆವೆ ನಾ ಬೇಗ ॥ ಸಂತಸದಿಂದ ನಿರಂತರ ಮಮಸೇವೆ । ಯಂ ತಳುವದೆಯೆ ನೀವಾಂತುದಕೊಲಿದಿಹೆ ॥೧॥ ಎರಡು ವರವನೀವೆ ನಿಮಗೆ । ಹಿತ । ಕರದಿ ಕೇಳಿರಿ ಕೊಟ್ಟು ಕಡೆಗೆ ॥ ತೆರಳಿ ನಾ ದೂರದೊಳಿರುವೆ ಕೆಲವು ಕಾಲ। ವರತಪದಿಂದಲಿ ಬರುವೆ ಮತ್ತಿಲ್ಲಿಗೆ ॥೨॥ ಮುಂದಿನೇಳಿಗೆಯ ಯೋಚಿಸುತ । ಕೇಳಿ। ರಿಂದು ನೀವೆನೆ ಕದ್ರು ಮತ್ತಾ ॥ ಮುಂದೆ ಸವತಿಯಳ ದಂದುಗಕಿಳಿಸಲಿ । ಕೆಂದು ಯೋಚಿಸಿ ಕಾಂತಗೆಂದಳು ವಿನಯದಿ ॥೩॥

ರಾಗ - ಯಮುನಾ ಕಲ್ಯಾಣಿ - ಝಂಪೆತಾಳ

ನೀರ ಕೇಳೆನ್ನಯ ವಿಚಾರ ಮಹನೀಯ । ವೀರರಾಗಿರ್ಪ ವಿಷವೇರಿರುವ ಫಣಿಯ ॥ ವಾರ ಸಾವಿರ ಜನಿಸುವಾ ರೀತಿಯೆನಗೆ । ಕಾರುಣ್ಯದಿಂ ಪಾಲಿಸೆನಲೆಂದ ಸತಿಗೆ ॥೧॥ ಅರಿತೆ ನಾ ಮನದೊಲವ ಸರಸಿರುಹ ನೇತ್ರೆ । ವರವ ನಿನ್ನಿಷ್ಟದೋಲ್ ಕರುಣಿಸಿದೆ ಕಾಂತೆ ॥ ಪೊರೆ ಗರ್ಭಪಿಂಡವೆಚ್ಚರದೊಳೆಂದರುಹೆ । ಕಿರಿಯರಸಿಯೊರೆದಳಾ ಎರೆಯಂಗೆ ನಮಿಸಿ ॥೨॥

ರಾಗ - ನವರೋಜು - ಏಕತಾಳ

ವಿಧಿಗೆ ಸಮಾನನು ನೀನು । ರೂ। ಪದಿ ಕಾಮಗೆಣೆಯವನು ॥ ಮುದದಿಂದೆನ್ನಯ । ಹೃದಯಾಂತರವನು । ಪದ ತಳದಲಿ ಪೇ । ಳ್ವುದ ನೀ ಲಾಲಿಸು ॥೧॥ ಸುತನೊಬ್ಬ ಸಾಕಿತ್ತು। ಈ । ಕ್ಷಿತಿಗೆ ಜನಿಸಿದರನಿತು ॥ಸುತ ಹೀನಳು ಯೆನಿ । ಸುತ ಗತಿಯಿಲ್ಲದ । ಸ್ಥಿತಿಯಪ್ಪುದು ಮಮ । ಮತ ಬೇರಿರ್ಪುದು ॥೨॥ ಕದ್ರು ಕುಮಾರಕರಿಂದ । ಬಲ । ವರ್ಧಿಸಿ ಶಕ್ತಿಗಳಿಂದ ॥ ಪೊದ್ದಿದುಭಯ ಸುತ । ರಿದ್ದರೆ ಸಾಕೈ । ಬುದ್ಧಿ ಬಲದಿ ಎಣೆ । ಯನ್ನರಿರದತೆರ ॥೩॥

ರಾಗ ಕೇತಾರಗೌಳ ಅಷ್ಟತಾಳ

ವನಿತೆಯ ನುಡಿ ಕೇಳಿ ಮನದಿ ಯೋಚಿಸಿದನು । ಘನದಸೂಯೆಯೊಳೀಕೆಯು ॥ ಇನಿತಾಡಿರುವಳೆಂದು ವಿನತೆಯ ಹತ್ತಿರ । ಮುನಿಪ ಕರೆವುತೆಂದನು ॥೧॥ ಒರಿಯಳಭರ್ಕರ ಸಾವಿರ ಪಾಲು ಬಲಯುತ । ರೆರಡು ಮಕ್ಕಳ ನಿನಗೆ ॥ ಕರುಣಿಸುವೆನು ಪಿಂಡ ಭರಿತ ಭದ್ರತೆಯಿಂದ । ಪೊರೆಯುತ್ತಲಿರಿ ನಿತ್ಯದಿ ॥೨॥

ಭಾಮಿನಿ

ಎಂದರುಹಿ ಮುನಿ ತೆರಳೆ ತಪಸಿಗೆ । ಸಂದಡಾ ಕೆಲಗಾಲ ಕದ್ರುವು । ಚಂದದಿಂದಂಡಗಳ ಸಾವಿರ ಪಡೆದು ಸಲಹುತಿರೆ ॥ ಮಂದಗಾಮಿನಿ ವಿನತೆ ಮತ್ಸರ । ದಿಂದೆರಡು ಮೊಟ್ಟೆಗಳ ಪಡೆಯುತ । ಹಿಂದು ಮುಂದಗಲದೆಯೆ ಸಲಹುತ್ತಿರ್ದಳತಿ ಮುದದಿ ॥೧॥

ವಾರ್ಧಿಕ್ಯ

ಕೆಲವು ಕಾಲಾಂತರದಿ ಕರಿಯರಸಿನದ ನೀಲ । ಬಿಳಿ ಹಸುರು ಕೆಂಪು ವರ್ಣದ ಹಲವು ರೂಪದಿಂ । ಎಳೆತೆಳತು ಕಾಂತಿಯಿಂ ಶೋಭಿಸುವ ನಾಗಗಳು ಬಲಿತಂಡದಿಂದ ಹೊರಗೆ ॥ ಸುಳಿಯುತಿರೆ ನಾಲ್ದೆಸೆಗೆ ಕಾಣುತ್ತ ವಿನತೆಯತಿ । ತಳೆದು ಮಾತ್ಸರ್ಯಮಂ ಪುತ್ರಾಭಿಲಾಷೆಯಿಂ। ಬಲಿಯದಿರ್ಪಂಡವೊಂದರ ಭೇದಿಸಲ್ಕರ್ಧ ಶಿಶುವ ಕಂಡಿಂತೆಂದಳು ॥೧॥

ರಾಗ - ನೀಲಾಂಬರಿ - ರೂಪಕ ತಾಳ

ಏನೆಸಗಿದೆನಕಟಕಟಾ । ತಾನತಿ ಮತ್ಸರದಿಂದಲಿ । ಹಾನಿಯ ಪಡಿಸಿದೆನೋರ್ವಸು । ತ್ರಾಣಿ ಮಗನ ಬಾಳ್ವೆ ॥ ಆ ನಾಗಗಳಂ ಪರಿಕಿಸಿ । ಬೇನೆಯ ತಡೆಯದೆ ಮನದಲಿ । ನಾನಂಡವ ಭೇದಿಸಿ ಮಮ । ಸೂನುವಿಗಿನಿತಾಯ್ತೆ ॥೧॥ ಚಲಿಸಲಿಕಾಗದೆ ಬಾಲಕ । ಹೆಳವನ ತೆನಾದನೆ ಬಲು । ಬಲಯುತ ಚೆಲುವನ ಬಾಳ್ವೆಗೆ । ಕುಲಕಂಟಕಿಯಾದೆ ॥ಸಲಹುವದೆಂತೀತನ ನಾ । ನುಳಿಸಿದ ರೇನ್ ಫಲವರಿಯೆನು । ಇಳೆಯಲಿ ಸತಿಯರ ನಿಂದೆಗೆ । ಬಲಿಯಾದೆನೆ ಹರಿಯೆ ॥೨॥ ಪ್ರೀತನ ನುಡಿಯನು ಮೀರುತ । ಜಾತನ ಕೆಡಿಸಿದೆನಕಟಾ । ಮಾತೊಂದಾಡಲು ಬಪ್ಪುದೆ । ನೆತ್ತಿ ಬಲಿಯದವಗೆ॥ ಬಾ ತರಳನೆಯೆಂದಪ್ಪುತ । ಧಾತ್ರಿಯೊಳುರುಳಲು ಕಂಡಾ । ಚೇತರಿಸುತ ಕುಳ್ಳಿರೆ ಪ್ರಭೆ । ಗಾ ರವಿ ನಾಚಿದನು ॥೩॥

ಕಂದ

ಸುರಿಸುತ ಕಣ್ಣಲವಂ ಶಿಶು । ಉರಿಗೆದರುತ ತಾಯ ಮೋರೆಯಂ ನೋಡುತ್ತಂ ॥ ಅರೆ ಘಳಿಗೆಗೆ ಮಾತಾಡದೆ । ಅರಿತಾ ಸಕಲವ ಕೆರಳ್ದು ನಿಂದಿಸುತೆಂದಂ ॥೧॥

ರಾಗ - ಪಂತುವರಾಳಿ - ಅಷ್ಟತಾಳ

ಯಾಕೆ ಚಿಂತಿಸುವೆ । ಎನ್ನಮ್ಮ ನೀ । ನ್ಯಾಕೆ ಚಿಂತಿಸುವೆ ॥ ಪ॥ ಯಾಕೆ ಚಿಂತಿಪುದೆನ್ನ ವ್ಯಾಕುಲಕೊಳಗೆಯ್ದು । ಲೋಕದ ನರಕಕೆ ನೂಕಿ ನೀನೀಪರಿ ॥ ಅ.ಪ ॥ ತಾಯೆ ನೀ ಪೂಜ್ಯಳು ಎನಗೆ । ಮುದಿ । ನಾಯಿಯಿಂ ಕಡೆಯಾದೆ ಹೀಗೆ । ಬಾಯಾರಿ ಮತ್ಸರಸೂಯೆಯಿಂ ಭೇದಿಸಿ । ಕಾಯದಿಂದುಳಿದೆ ನಾನು । ಕೊಲ್ಲದೆ ನಾನು । ಸಾಯದೆ ಬದುಕಿದೆನು । ಹೆಳವನಾಗಿ । ಬಾಯಿಂದ

Scanned by CamScanner

ಪೇಳ್ದರೇನು । ಲಾಲಿಪ ನೀನು ॥ ಯಾಕೆ ॥೧॥ ಮುಂದಕೆ ನಿನಗೆ ಸನ್ನಿಂದ । ಸುಖ । ಬಂದಪುದೇ ಫಣಿವೃಂದ । ಹಿಂಪೆ ಕುತಂತ್ರದಿ ಸೋಲಿಸುವರು ದಿಟ । ಮುಂದೆ ನೀ ಕದ್ರುವಿಗೆ । ನಿರಂತರ । ನಿಂದು ಸೇವೆಯನೆಸಗೆ । ನಿನ್ನಯ ಬುದ್ಧಿ । ಬಂದಪುದ್ಯೆ ದಾರಿಗೆ । ಸುಳ್ಳಲ್ಲವು ॥ ಯಾಕೆ ॥೨॥ ಅಕ್ಕನೊಳ್ ಮತ್ಸರದಿಂದ । ಅಂಡ । ತಿಕ್ಕಿ ಪಡೆದೆ ಸೊಗಸಿಂದ । ದುಃಖಿಕಿಳಿದೆ ಪತಿ ವಾಕ್ಯವ ಮೀರಿ ಲೋ । ಕಕ್ಕೆ ಹೇಸಿಕೆಯ ಗೈದೆ । ನಾನೋರ್ವಯಾ । ತಕ್ಕೊ ಬೇಡದವನಾದೆ । ಜ್ಯೇಷ್ಠಳ ಕೆಲ । ಸಕ್ಕೆ ನೀ ಭಾಗಿಯಾದೆ । ಮಾಡಿದ ಕರ್ಮ ॥ ವ್ಯಾಕೆ ॥೩॥

ಭಾಮಿನಿ

ಪುತ್ರನಾಡಿದ ನುಡಿಯ ಕೇಳುತ । ಕತ್ತಿಯಿಂದಿರಿದಂತೆ ಹೃದಯಕೆ । ನಿತ್ತು ಸಂತಾಪಾಗ್ನಿಯಿಂ ಮಸ್ತಕವ ಹೊಡಕೊಳುತ ॥ ಚಿತ್ರದಲಿ ತತ್ಥಳಿಸಿ ಕುವರಗೆ । ಚಿತ್ರಹಿಂಸಕಳಾದೆ ತಾನೆಂ । ದತ್ತು ಕೊಳ್ಳುತಲೆತ್ತಿ ಬಾಲನ ನುಡಿದಳಾತನೊಳು ॥೧॥

ರಾಗ - ಯರಕಲ ಕಾಂಬೋದಿ - ತ್ರಿವುಡೆತಾಳ

ಬಾರೆನ್ನ ಮುದ್ದುಕಂದ । ನಿನಗೆ ಘೋರ । ಮಾರಿಯ ರೂಪದಿಂದ ॥ ತೋರುವಂತಾಯಿತೆ ವಾರಿಧಿ ಮಗುಚಲು । ಪಾರುಗಾಣಿಸುವರುಂಟೆ । ಮಾತಿನ್ನುಂಟೆ ॥೧॥ ಸಾಕುವ ತಾಯಿ ತನ್ನ । ಬಾಲನಿಗೆ ಮ । ಹಾ ಕಾಳ ಕೂಟವನ್ನ ॥ ತಾ ಕರೆದುಣಿಸಲು ಲೋಕದಿ ಕಾಯ್ವ ಮ । ತ್ತಾ ಕರುಣೆಯು ಯಾವನು । ತಿಳಿಯೆ ನಾನು ॥೨॥ ಬಲಿಯದ ಪಿಂಡವನು । ಭೇದಿಸಿ ನಿನ್ನ । ಹೆಳವನಂತೆಸಗಿದೆನು ॥ ಕೊಲದೆ ಹಿಂಸೆಯಗೈದ ಬಲು ಪಾಪಿಯೆನ್ನನು । ಹಳಿದು ಕೊಂದರು ದೋಷವು । ಬಾರದು ನಿಜವು ॥೩॥ ಲೋಕದ ಶಿಶುಗಳಂತೆ । ನೀನಲ್ಲ ಮ । ಹಾ ಕಾರಣೀಕನಂತೆ ॥ ವಾಕುಗಳಾಡಿದೆ ನೀ ಕೊಟ್ಟ ಶಾಪವಿ । ನ್ನಾ ಕಡೆಯಹುದೆಂದಿಗೆ । ಪೇಳದನೆನಗೆ ॥೪॥

ರಾಗ - ಕಾಂಬೋದಿ - ಝಂಪೆತಾಳ

ಗೋಳುಗುಡಲೇಕವ್ವ ಕೇಳು ನೀ ಮನವಿಟ್ಟು । ಖೂಳ ಬುದ್ಧಿಯ ಮರೆದು ಮುಂದೆ ॥ ಪಾಲಿಸುಳಿದೊಂದಂಡ ಮೇಲ್ಯೆದು ಶತ ವರುಷ । ಕಾಲ ಕಳೆದುದಿಸಿ ಬಹ ಸುತನು ॥೧॥ ಪೃಥ್ವಿ ಮೂರರೊಳವನ ಸತ್ವಕಿದಿರಾರಿಲ್ಲ । ಪೆತ್ತವ್ವೆ ನಿನ್ನ ದಾಸ್ಯವನು ॥ ಶಕ್ತಿಯಿಂ ಕಳೆದು ದೇವತ್ವದಿಂ ಜಗಕೆ ಹರಿ । ಯಾಪ್ತನಾಗುತ ಮೆರೆವ ಸಿದ್ಧ ॥೨॥ ನಲ್ಮೆಯಿಂ ಪಿತನೆಂದ ಸೊಲ್ಮೆರೆತು ಎನ್ನ ಪಡೆ ದೋಲ್ಮಗನ ಮುಂದೆ ಕೆಡಿಸದಿರು ॥ತಾಳ್ಮೆಯಿಂ ನಾ ನಿನಗೆ ಪೇಳ್ದಪ್ಪು ಕಾಲಂಡ । ಮೇಲ್ಮಮತೆಯಿಂದ ಸಲಹಮ್ಮ ॥೩॥ ಮುಂದೆ ನಿನ್ನಯ ಸುಖಕೆ ಕಂದನಾತನೆ ಹೊಣೆಯು । ಎಂದರುಹುತಗ್ನಿ ತೇಜದಲಿ ॥ ನಿಂದರುಣ ಜತನವಿರಲೆಂದರುಹಿ ಅದೃಶ್ಯ । ಹೊಂದಿ ಜನಕನ ಬಳಿಯೊಳಿರ್ದ ॥೪॥

ವಾರ್ಧಿಕ್ಯ

ಮೇಲಕಡರಿದ ಸುತನ ನೋಡಿದಳು ಬಾಡಿದಳು । ಖೂಳ ಬುದ್ಧಿಯಗೈದೆನೆಂದು ತನ್ನನೆ ಛೆದು । ಬಾಲನಾಡಿದ ನುಡಿಯನೊಂದೊಂದ ಯೋಚಿಸುತ ವಿನತೆ ಸಂತಾಪದಿಂದ ॥

ಪೇಳದಾರಿಗು ನಡೆದ ವಾರ್ತೆಯಂ ಗುಪ್ತದಲಿ । ಲೋಲಾಕ್ಷಿ ಕದ್ರುವಿನ ಕುವರರಲಿ ಸಂತಸವ । ತಾಳಿ ಪತಿಯಗಲಿಕೆಯ ನೆನೆದು ತಮ್ಮಾಲಯದಿ ನೆಲಸಿರ್ದರೀರ್ವರಂದು ॥೧॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಪಾಕ ಶಾಸನ ನೆರಹಿ ದಿವಿಜರ । ನಾಕದೊಳಗೋಲಗವನೀವುತ । ತಾ ಕರೆದು ಪೇಳಿದನು ಸಂತಸ । ಲೋಕಕಿಳಿದು ॥೧॥ ಹರಿಯ ದಯದಿಂ ಶರಧಿ ಮಥನದಿ । ಪರಿ ಪರಿಯ ಸೌಭಾಗ್ಯ ಸ್ವರ್ಗಕೆ । ದೊರಕಿದಾಮಿಗೆ ಸುಧೆಯ ಕುಡಿದೆವು । ಹರುಷದಿಂದ ॥೨॥ ವಂಚಿಸಿದ ಸ್ವರ್ಭಾನುವೆಂಬನ। ಪಂಚ ಬಾಣನ ಪಿತನು ಚಕ್ರದಿ । ತಾಂ ಚಳಕದಿಂ ತರಿದು ದಾನವ । ಸಂಚಯವನು ॥೩॥ ಕೊಂದ ಮಿಗೆ ಸುಖದಿಂದ ಲಿಹೆ ದಿವ । ಕೆಂದು ತೊಡರಿನ್ನೊದಗಲಾರದು। ಮುಂದಕಾಲಿಸಿ ಮನದಿರವ ಹಿತ । ದಿಂದಲೊರೆವೆ ॥೪॥

ವಾರ್ಧಿಕ್ಯ

ಶರಧಿಯಿಂ ದೊರೆತ ಪರಿ ಪರಿಯ ಸಂಪದದೊಡನೆ । ಸುರರ ನೆರಹುತ ಗಣಿಕೆಯರ ನರ್ತನದಿ ಲೋಕ । ಚರಿಸುವಾತುರವಿಹುದು ಸುರ ಕಲ್ಪ ಮೆರೆವ ಚೂಡಾರತ್ನ ಚಿಂತಾಮಣಿ ॥ ಸುರ ಗಜದ ಜತೆಯೊಳಗೆ ಬರಲಿ ಉಚ್ಚೈಶ್ರವವು । ವರ ಕಾಮಧೇನು ವಜ್ರಾಯುಧವು ವಾದ್ಯ ಹೊಂ । ದಿರಲೆಂದು ನೆರಹುತ್ತ ಗಗನ ಮಾರ್ಗದಿ ಚರಿಸುತಯ್ತಂದನುತ್ಸಾಹದಿ ॥೧॥

ಕಂದ

ಸಾರುತ್ತಿರಲಾ ನಭದಲಿ । ವಾರುಹವಂ ಕದ್ರು ಕಂಡು ದುರ್ಯೋಚನೆಯಿಂ । ಭೋರನೆ ಕರೆದಾ ವಿನತೆಗೆ । ತೋರುತ ಸಕಲವನು ಪೇಳ್ದಳ್ಹಯವಂ ತೋರ್ದುಂ ॥೧॥

ರಾಗ - ಬೇಹಾಗ್ - ಅಷ್ಟತಾಳ

ಸವತಿ ವಿನತೆ ನೋಡೆ ಗಗನ । ದಿವಿಜರ ಕುದುರೆಯ ಗಮನ ॥ ತವಕದಿ ಪೇಳದರ ಬಣ್ಣ। ಜವದೊಳಾವುದೆನುತ ಮುನ್ನ ॥೧॥ ದೇವ ಹಯದ ವರ್ಣ ಬಿಳಿದು । ಯಾವನಿಗಾದರು ಗೊತ್ತಿಹುದು ॥ ಕೋವಿದೆ ನಿನಗಿನ್ನು ಬೇರೆ । ಭಾವವಿರಲು ಪೇಳೆ ಚತುರೆ ॥೨॥ ಒಪ್ಪುವದರ ದೇಹ ಬಿಳುಪು ದಪ್ಪ ಬಾಲ ಕೇಶಕಪ್ಪು ॥ ಇಪ್ಪುದು ನೋಡದೆ ಮಾತ । ದರ್ಪದೊಳಾಡುವದನೀತ॥೩॥ ದೇಹ ಬಾಲವೆಲ್ಲ ಶ್ವೇತ । ವಾ ಹಯಕ್ಕೆ ನಿಜವು ಮಾತ ॥ ನೀ ಹರಟೆಯ ನುಡಿಯಲ್ಯಾಕೆ। ಗೇಹಕೆ ಸಾರತ್ತ ಜೋಕೆ ॥೪॥

ರಾಗ ಮಾರವಿ ಏಕತಾಳ

ಮುಚ್ಚೆಲೊ ಬಾಯನು ಉಚ್ಛೈಶ್ರವದಾ । ಪುಚ್ಛವು ಕರಿದೆಂದು ॥ ನಿಶ್ಚಯ ತೋರುವೆ ಎಚ್ಚರಿಕೆಯ ಮರೆ । ತುಚ್ಛರಿಸದಿರೀಗ ॥೧॥ ಕುದುರೆಯು ಬಿಳಿದೆಂಬುದೆ ವಾದಿಪೆ ಪಂಥದಿ ನಾಬಿಡೆ ನಿನ್ನ ॥ ಚದುರೋಕ್ತಿಗಳನು ಇದರೊಳು ಸುಲಭದಿ । ಹದಗೆಡಿಸುವೆ ಖಚಿತ ॥೨॥ ಆದಡೆಯೆನ್ನೊಳು ವಾದಿಪೆಯಾದರೆ । ಸಾಧಿಸುತುಭಯರೊಳು ॥ ಮೋದದಿ ಸೋತವರಾ ದಾಸ್ಯವ ನಿಂ । ದಾಧರಿಪ್ಪುದು ನಿರತ ॥೩॥ ನೀ ಸೋತರೆ ಎನ್ನಾ ಸೇವೆಗೆ ನಿಲು । ನಾ ಸಾಧಿಸದಿರಲು ॥ ದಾಸಿಯಾಗಿ ಪದದಾಶ್ರಯ ಪಡೆವೆನು । ಮೋಸವೆಸಗೆ ದಿಟವು ॥೪॥

Scanned by CamScanner

ಕಂದ

ಪಂಥವ ನಿಶ್ಚೈಸುತ್ತಲಿ । ಕಾಂತೆಯರೀರ್ವರು ತೆರಳಲು ತಮ್ಮಾಲಯಕಂ ॥ ತಾಂತವಕದಿ ಫಣಿಗಳ ಪಡೆ । ಯಿಂತುಸುರಿದುದಾಗ ಮಾತೆಯಂ ಪುಡುಕುತ್ತಂ ॥೧॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಗುಣಮಣಿಗಳಿರ ಕೇಳಿ ನಮ್ಮಯ । ಜನನಿಯಿನ್ನಾವೆಡೆಗೆ ಪೋದಳು । ಮನೆಯೊಳಿಲ್ಲಿಯು ಕಾಣಳೇತಕೆ । ಅನುಜರರುಹಿ ॥೧॥ ನಿತ್ಯದಲಿ ಆಹಾರ ಶೇಖರಿ । ಸುತ್ತ ಪುತ್ರರ ಬರವ ನೋಡುತ್ತ ಹೊತ್ತು ಸಾಧಿಪ ಮಾತೆಯಿಲ್ಲ ವಿ । ಚಿತ್ರವೈಸೆ ॥೨॥ ಸೃಷ್ಟಿಯಲಿ ನಾವರಿಯದಿಹ ಘನ । ಕೆಟ್ಟ ಕೃತ್ಯವಗೈದವೆನುತಲಿ । ಸಿಟ್ಟಿನಿಂ ಮನ ಬಿಟ್ಟು ಪೋದಳೆ । ಕಷ್ಟವಾಯ್ತು ॥೩॥ ತಾತನಿಲ್ಲೆಂದಾತನನು ಕಾಂ । ಬಾತುರದಿ ಅರಸುತ್ತ ಪೋದಳೊ । ಜಾತರನು ವಂಚಿಸಲು ಮರೆಯಿಂ । ದಾತಳಿಹಳೊ ॥೪॥ ವಿನತೆಯಿಂದಾಪತ್ತು ಮತ್ಸರ । ವನುಸರಿಸಿ ತೊಡರಾಗಿ ಕಾಣದೆ । ತನಯರನು ಹಾರೈಸಿಹಳೊ ನಿಜ । ವಿನಿತರಿಯೆವು ॥೫॥

ಭಾಮಿನಿ

ಉರಗರೀ ತೆರದಿಂದ ಸಂಶಯ .। ಭರಿತರಾಗುತ ನಾಲ್ಕು ದೆಸೆಗಳ । ಸರಿದು ಗುಹೆ ಬಿಲಗಳನು ಶೋಧಿಸುತಿರ್ದರವರತ್ತ ॥ ಒರೆದು ಪಂಥವ ಕದ್ರುವಿತ್ತಲು । ಸೊರಗಿ ವಾದದಿ ಗೆಲುವ ಬಗೆಯ। ನ್ನರಿಯದೆಯೆ ಸಜ್ಜೆಯಲಿ ಯೋಚಿಸುತಿರ್ದಳೀತೆರದಿ ॥೧॥

ವಾರ್ಧಿಕ್ಯ

ಸುರ ಹಯದ ಬಾಲ ಕಪ್ಪೆಂದು ನಾ ಪಂಥವ । ನ್ನೊರೆದು ತೋರಿಸಿ ಗೆಲ್ಲದಿರೆ ವಿನತೆಯಳ ಸೇವೆ ವಿರಚಿಸುವ ಕಾಲ ಭವಿಸಿತೆ ತನಯರಿಂಗೊರೆಯೆ ಎಂತು ಪರಿಹರಿಪರವರು ॥ ಧರೆಯೊಳಗೆ ಮುಖ ತೋರಿ ನಾ ಬಾಳಲೆಂತರಿಯೆ । ಕೊರಗಿ ಉಪವಾಸದಿಂದಿರ್ದು ಸಜ್ಜಾಗೃಹದಿ । ಹರಣ ನೀಗುವೆನೆಂದು ಮರುಗುತ್ತ ಬಳಲುತ್ತ ಪವಡಿಸಿರೆ ನರಳುತ್ತಲಿ ॥೧॥

ರಾಗ ಭೈರವಿ ಅಷ್ಟತಾಳ

ಸುಳಿದನಿಲನ ವೇಗದಿ । ನಾಗಗಳೆಲ್ಲ । ಇಳೆಯ ಜನರ ಕ್ರೋಧದಿ ॥ ನಿಲಿಸಿ ಕೇಳುತ ಪೆತ್ತವಳನು ಕಾಣದೆ ಕೊಳ । ನಲಿ ಹೊಕ್ಕು ಶೋಧಿಸುತ ॥೧॥ ಸಂದುಗೊಂದನು ಕಳೆದು । ಗುಹೆಯು ನೃಪ । ಮಂದಿರ ಸುಳಿದುಳಿದು ॥ ಬಂದಡ್ಡವಿಸಿದರ ವೃಂದಕೆ ವಿಷ ಸೂಸಿ । ಕೊಂದು ಬಳಲಿ ಬರಲು ॥೨॥ ದಣಿವುತ್ತ ಹಸಿವೆಯಿಂದ । ಮನೆಯೊಳೆಲ್ಲ । ಫಣಿಗಳು ಚಿಂತೆಯಿಂದ ॥ ಮನಗುಂದಿ ಸಜ್ಜೆಯೊಳ್ ಜನನಿ ದುಃಖಿಸುತಿರೆ । ತನಯರೆಂದರು ಧೈರ್ಯದಿ ॥೩॥

ರಾಗ ಮಾರವಿ ಏಕತಾಳ

ಮಾತೆಯೆ ಚಿಂತಿಪ ರೀತಿಯದಾವುದು । ನೀತಿಳುಹದನೆಮಗೆ ॥ ಖ್ಯಾತರಾದ ತನುಜಾತರಿರಲು ಇ । ನ್ನೇತರ ಭಯ ನಿನಗೆ ॥೧॥ ಕಾಣದೆ ಮನೆಯೊಳು ಕ್ಷೋಣಿಯನರಸುತ । ನಾನಾ ಕಡೆಗಳಲಿ॥

ಜಾಣರನೆಲ್ಲ ವಿಚಾರಿಸಿ ದಣಿದೆವು । ತ್ರಾಣಗುಂದಿ ಬಳಲಿ ॥೨॥ ಶೋಕವ ಬಿಡು ತವ ವ್ಯಾಕುಲವರುಹಲು । ಲೋಕ ಮೂರ ಸುಳಿದು ॥ ನಾ ಕೈಗೂಡಿಪೆ ಬೇಕಾದುದ ಚಿಂ । ತಾ ಕಳೆ ಕಿತ್ತೇಳು ॥೩॥ ಕಿತ್ತಿರಿಪೆವು ಬ್ರಹ್ಮಾಂಡವ ಶರಧಿಯ । ಬತ್ತಿಸುವೆವು ಓರಿ ॥ ಚಿತ್ತದ ಪೇಕ್ಷೆಯನಿತ್ತಪೆ ಪೇಳ್ವೆ । ಪುತ್ರರೊಳ್ ದಯ ಬೀರಿ ॥೪॥ ಆರಿಂದೀ ಶೋಕಾರ್ಣವವಾದುದು । ಕಾರಣವೇನರುಹು ॥ ತೀರಿಪೆವೆಂಬ ಕುಮಾರರ ತಳ್ಕಿಸಿ । ನಾರಿ ನುಡಿದಳಾಗ ॥೫॥

ರಾಗ - ಸಾಂಗತ್ಯ - ರೂಪಕತಾಳ

ಮಕ್ಕಳೆ ಎನ್ನಯ ದುಃಖವ ನಿಮಗೆಂದು । ತಕ್ಕುದ ಪರಿಹಾರ ಕಾಣೆ ॥ ಸೊಕ್ಕಿ ಪಂಥವನಾಡಿ ಚಿಕ್ಕತಾಯಿಯ ದಾಸ್ಯ । ದೊಳ್ಕಾಲ ಕಳೆವಂತಾಗಿಹುದು ॥೧॥ ಸುರ ವಾರುಹದ ವರ್ಣ ಬಿಳಿಯೆಂದಾಕೆಯು ಪೇಳೆ । ಕರಿದಾಗಿರುವದೆಂದು ನಾನು ॥ ಒರೆದೆ ಪಂಥವ ನಾನೆಂದಂತಿರದಿರೆ ಸೇವೆ । ವಿರಚಿಪೆ ನಿನಗೆಂದು ಬಂದೆ ॥೨॥ ಬಾಲವು ಕಪ್ಪಾಗಿ ತೋರಿಸದಿರೆ ನಾಳೆ । ಊಳಿಗದವಳಾದೆನವಳ್ಗೆ ॥ ಪೇಳಿದ ಮಾತನು ಪೂರೈಸಲರಿಯದೆ । ಹಾಳು ಸಜ್ಜೆಯ ಸೇರ್ದೆ ಬಳಲಿ ॥೩॥

ವಾರ್ಧಿಕ್ಯ

ಶ್ವೇತ ವರ್ಣದ ತುರಗದಾ ಬಾಲ ಕಪ್ಪೆಂದು । ನೀ ತಿಳಿದು ಪಂಥವಂ ಗೈದೆಯಾತಕೆ ಮುಂದೆ । ಮಾತು ಸಲಿಸುವ ರೀತಿಯೇನಿಹುದು ಪೇಳೆನಲು ಭೀತಿ ಬಿಟ್ಟೊರೆದಳಾಗ ॥ ಆ ತಳೋದರಿಯನೆನ್ನಯ ಸೇವೆಗಿರಿಸಲಿಕೆ । ಮಾತಿನಿಂ ಕೆದರಿ ಪಂಥವನೆಸಗಿದೆನು ನಿಮಗೆ । ಪ್ರೀತಿ ಕಾಂಕ್ಷೆಗಳಿರಲು ನಾ ದಾಸಿಯಾಗದಹ ರೀತಿ ಕೇಳೆನುತೆಂದಳು ॥೧॥

ಆರ್ಯಸವ್ಯಾ

ನಾಳೆ ಪರೀಕ್ಷೆಯ ವೇಳೆಗೆ ಕಪ್ಪಿನ । ಬಾಲಹಿಂಗಳು ಹರಿ ಬಾಲದಲಿ ॥ ಜೋಲಾಡಲು ಪಣದೊಳ್ಗೆಲ್ಲುವೆ ಮಮ । ಕಾಲಿಗೆ ಬೀಳ್ವಳು ದುಗುಡದಲಿ ॥೧॥ ಮತ್ತೆ ನಿರಂತರ ತೊತ್ತಿಯಂತೆ ಬಳ । ಲುತ್ತಿರ್ಪಳು ಸುಖ ಮುಂದೆನಗೆ ॥ ಪುತ್ರರೆ ನೀವಿದ ಹೊತ್ತಿಗೆ ಸಾಧಿಸಿ । ರುತ್ತಮವೆನೆ ಪೇಳಿದರವಳ್ಗೆ ॥ ೨॥

ರಾಗ ದೇಶಿ ಏಕತಾಳ

ಶಿಶುಗಳಿಗಿಂತುಸುರಬಹುದೆ । ಎಲೆತಾಯೆ । ದು । ರ್ಯಶದ ಕಾರ್ಯ ವೆಸಗಲೊಳಿತೆ । ಎಲೆ ತಾಯೆ ॥ ವಿಷಮದಿ ಸೋಲಿಸುತಲವಳ । ಎಲೆ ತಾಯೆ । ಪಾದ । ಬಿಸಜಸೇವೆಯೆಸಗಿಸುವುದೆ । ಎಲೆ ತಾಯೆ ॥೧॥ ಪುತ್ರರ ಸದ್ ವೃತ್ತಿಗಿಳಿಸ । ದೆಲೆ ತಾಯೆ । ದು । ಷ್ಕೃತ್ಯಕಿಳಿಪ ಯುಕ್ತಿ ಸರಿಯೆ। ಎಲೆ ತಾಯೆ ॥ ಮತ್ಸರಿಪುದೆ ಉತ್ತಮಳಲಿ । ಎಲೆ ತಾಯೆ । ಸ । ತ್ಕೀರ್ತಿ ಬಹುದೆ ಪೃಥ್ವಿಯೊಳಗೆ। ಎಲೆ ತಾಯೆ ॥೨॥

ರಾಗ - ಶಂಕರಾಭರಣ - ತ್ರಿವುಡೆತಾಳ

ದಾರಿಯಲಿ ಸಂಚರಿಪ ಮಾರಿಯ । ಸೇರಿಸುತ ಸ್ವಗೃಹದಲಿ ॥ ಊರ ನುಂಗಲು

Scanned by CamScanner

ಮರುಗಿದರೆ ಪರಿ । ಹಾರವುಂಟೆ ||೧|| ಸಲ್ಲದಿಹ ಕಾರ್ಯಕ್ಕೆ ಬರಿದೇ । ಹೊಳ್ಳು ಪಂಥವ ಮಾಡುತ || ಬಲ್ಲಿದರು ಮರುಗಿದರೆ ತಲೆ ಸರಿ । ಯಿಲ್ಲ ನಿಜವು ||೨|| ಜ್ವಲಿಸುವಗ್ನಿಗೆ ಕೈಯ್ಯನಿರಿಸುತ । ಬಳಿಕ ಸುಟ್ಟಿಲ್ಲವರೊಳು || ತಲೆಯೊಳಗೆ ವಿಧಿ ಬರೆದನೆಂದರೆ । ಫಲಗಳೇನು ||೩|| ಸೋತೆ ನೀನದರಿಂದಲಾಕೆಗೆ । ಮಾತಿನಂದದಿ ದಾಸ್ಯದಿ || ಪ್ರೀತಿಯಿಂ ಬಾಳುವುದು ಉಳಿದೀ। ರೀತಿಯಿಂದ ||೪|| ಯತ್ನದಲಿ ವಿನತೆಯನು ಸೋಲಿಸೆ । ಮಸ್ತಕದಿ ರವಿಯುದಿಪನೆ || ಮತ್ತ ಕೊಡುದ್ಯವಿಪುದೇ ನೀ । ನತ್ತ ಸಾರೈ ||೫||

ವಾರ್ಧಿಕ್ಯ

ತನಯರಾಡಿದ ನುಡಿಯ ಕೇಳಿ ಖತಿಯಿಂ ಕದ್ರು । ಫಣಿಗಳಿಂಗುಸುರಿದಳು ಪೆತ್ತು ಸಲಹಿದ ನಿಮ್ಮ । ಜನನಿಗೆರಡಾಡಿದಿರೆ ವಿನತಾಂಗನೆಯ ದಾಸಿಯೆನಿಸಿ ನಾನಿರಲೊಲ್ಲೆತ್ತ || ಬಿನುಗರಿರ ಪಾಂಡವ ಕುಲೋದ್ಭವನು ವೀರನೃಪ । ಜನಮೇಜಯನು ಮಾಳ್ಪ ಸರ್ಪಯಾಗದಿ ನಿಮ್ಮ । ದಿನಿತು ಕುಲ ನಾಶವಾಗಲಿಯೆನುತ ಶಪಿಸಲ್ಕೆ ಬಿಲ ಸೇರೆ ಭಿತಿಯಿಂದ ||೧||

ರಾಗ - ಕಾಂಬೋದಿ - ಝುಂಪೆತಾಳ

ತರುಣಿಮಣಿಯಿರಲಿತ್ತ ಸರಸಿಜಾಸನ ಶಾಪ । ದಿರವರಿತು ಸಂತಸವ ತಳೆದು || ನರರ ಪೀಡಿಪರಿಂಗೆ ಸರಿಯಾಯ್ತು ವಿಧಿಯೆಂದು । ಸುರಪಾಲನಂ ಕರೆದು ಪೇಳ್ದ ||೧|| ಕದ್ರುವಾಡಿದ ಮಾತನೆದ್ದು ಧಿಕ್ಕರಿಸಿರ್ಪ । ಉದ್ಧತ ಬಲಾಢ್ಯರಹಿಕುಲಕೆ || ಸಿದ್ಧವಾಯಿತು ಶಾಪ ಜನಮೇಜಯನ ಯಾಗ । ದೋಳ್ದಹಿಸುವವು ಸತ್ಯ ಮುಂದೆ ||೨|| ಇಂದ್ರಾಸನಕೆ ತೊಡರು ಬರುವದೆಚ್ಚರದಿಂದ। ನಿಂದಿರುವದೆನೆ ಶಕ್ರನೆಂದ || ಎಂದೆಂದು ಹರಿಹರಾದ್ಯರ ಕರುಣವೆಮಗಿರಲು । ಬಂದುಪ್ಪುದೆ ಕಷ್ಟ ನಾಕದಲಿ ||೩|| ಇದುವರೆಗೆ ನಿಮ್ಮನುಗ್ರಹದಿ ಬಾಳ್ದೆವು ಮುಂದೆ । ಸದಯಾರ್ಣವರೆ ಸಲಹಿರೆನುತ || ತ್ರಿದಶಪತಿ ತೆರಳಲ್ಕೆ ವಿಧಿಯು ಕಾಶ್ಯಪನೆಡೆಗೆ । ಮುದದಿ ಬಂದಿಂತೆಂದ ನಗುತ ||೪||

ರಾಗ - ಕೇತಾರಗೌಳ - ಅಷ್ಟತಾಳ

ಕೇಳು ಪ್ರಜಾಪತಿ ಲೋಲಾಕ್ಷಿ ಕದ್ರು ವಿ । ಶಾಲವಾಗಿಹ ಸರ್ಪದ || ಜಾಲಕೆ ಮಖದಿ ನಿರ್ಮೂಲವಾಗುವ ಶಾಪ । ಪೇಳಿದಳ್ಮನಿಯ ಬೇಡ ||೧|| ಗರಳಸಂಪದರಾಗಿ ನರರಿಗೆ ಚರಿಸಲು । ಧರೆಯೊಳು ಕಷ್ಟವಾಗಿ || ಮರುಗುವರೆಲ್ಲರೀ ಉರಗಗಳಳಿದರೆ । ಕರುಣೆ ಸ್ಮರಣೆಯ ತಾಳು ||೨|| ವಿಷಹರೀ ಮಂತ್ರವನುಸುರುವೆ ನಿನಗೆಂದು । ಬೆಸಸಿ ತೆರಳಲಜನು || ಋಷಿ ಏಕಧ್ಯಾನದಿ ತಪದಿ ನಿರತನಾಗಿ । ವಸುಧೆಯೊಳೆಸೆದಿರ್ದನು ||೩||

ಕಂದ

ಕೋಪದಿ ಪಾತಾಳದೊಳು ಮ । ಹಾಶೇಷಂ ವಿಭವದಿಂದ ಓಲಗವಿತ್ತಿರೆ || ರೋಷದಿ ಕದ್ರು ಶಪಿಸಿದುದ । ಕ್ಲೇಶದಿ ಗೂಢಹಿಗಳೆಂದರಾತಗೆ ಮಣಿದುಂ ||೧||

ರಾಗ - ಸುರುಟ - ಏಕತಾಳ

ಕೇಳಮ್ಮಯ ಧಾತ । ಫಣಿಗಳ । ಜಾಲಕ್ಕಧಿನಾಥ || ಪೇಳಲರಿಯೆ ಕುಲ । ಹಾಳಾಯಿತು

ಮುಂ । ದೇಳಿಗೆಯಿಲ್ಲ ಸು । ಶೀಲ ದಯಾನಿಧೆ ||೧|| ಜನನಿಯೊರೆದ ನುಡಿಗೆ । ಮೀರುತ । ಫಣಿಗಳೊರೆಯೆ ಕಡೆಗೆ || ಕಿನಿಸಿಂ ಶಾಪವ । ತನಯರಿಗಿತ್ತಳು । ಜನಮೇಜಯನ । ಧ್ವರದಲಿ ಸಾಯಲು ||೨|| ಅಹಿಗಳು ಭೀತಿಯಲಿ । ಚರಿಸದೆ । ಗುಹೆಯೊಳಗಡಗುತಲಿ || ಸಹನೆ ಗಳರಿಯದೆ । ಬಹು ಬಳಲುವರನು । ಗ್ರಹದಿಂ ಪಾಲಿಸು । ವಿಹಿತವನರುಹುತ ||೩||

ಕಂದ

ಬೇಹಿನವರ ಕಳುಹುತ್ತಲಿ । ಶ್ರೀ ಹರಿಯೇ ಗತಿಯಿದಕ್ಕೆನುತ ಚಿಂತಿಸುತಂ || ಸೋಹನ್ನರಿತಾ ಫಣಿಗಳ । ಸಾಹಸ್ರವ ಬರಲು ಪೇಳೆ ಬರುತಿರಲಾಗಳ್ ||೧||

ರಾಗ ಭೈರವಿ ತ್ರಿವುಡೆತಾಳ

ನೆರೆದರಾಗ । ಬಲಯುತ । ರಿರದೆ ಬೇಗ || ಪ|| ನೀಳ ವಾಸುಕಿ ಕಲಶ ಪೋತಕ । ಕಾಲಿಯ ಸುಮನ ನೀಲವಾಮನ । ವ್ಯಾಳ ಕಾರ್ಕೋಟಕ ಧನಂಜಯ । ಬಿಲ್ವ ಪಾಂಡುರ ತಕ್ಷಕಾದ್ಯರು || ಶಾಲಿ ಪಿಂಡ್ಯೆರಾವತನು ಬಹು । ಮಾಲ ತಿತ್ತಿರಿ ಹಲಿಕ ಕರ್ದಮ । ಬಿಲ್ವಕೇಲಾ ಪತ್ರ ಜ್ಯೋತಿಕ । ಕಾಲಿಯಕ ಮೊದಲಾದ ಸುಭಟರು । ಬಂದರಾಗ । ಸಕಲರೂ । ಳೆಂದನಾಗ ||೧|| ಮಾತೆಯಾಜ್ಞೆಯ ಮೀರಿದಕೆ ನಮ । ಗಾಯ್ತು ಶಾಪವು ನೆನೆದು ಯತ್ನದಿ । ಸೋತಿರುವೆವಾವೆಲ್ಲ ವಿನತೆಯ । ಮಾತು ಪುಸಿಯಹ ರೀತಿ ಗೈಯಲು || ಪ್ರೀತಿಯಿಂದಲಿ ತಾಯಿ ಮನ್ನಿಪ । ಳಾತಳುವದೀ ಕ್ಷಣದಿ ನಿಮ್ಮಯ । ಆತುರವನೆನಗರುಹಿ ಶುಭವಹ । ರೀತಿ ಕಾಣುವೆನೆನಲು ಶೇಷಗೆ । ನುಡಿದನಾಗ । ವಾಸುಕಿ । ದೃಢವ ಬೇಗ ||೨||

ರಾಗ - ಕೇತಾರಗೌಳ - ಝುಂಪೆತಾಳ

ತಪ್ಪಿಲ್ಲ ನಮ್ಮೊಳೆಂದು । ಮಾತೆಯು ವಿ । ಕಲ್ಪವಾಡಿದಡೆ ನೊಂದು || ಒಪ್ಪದಿಹ ನಮಗೆ ಶಾಪ । ಕೊಟ್ಟಿಹಳು । ಸ್ವಲ್ಪವಿಲ್ಲಿದಕೆ ಕೋಪ ||೧|| ಹುಸಿಯ ಪಂಥದಿ ವಿನತೆಯ । ಸೋಲಿಸಲು । ಯಶವಿಹುದೆ ಪೇಳು ಒಡೆಯ || ವಸುಧೆಪಾಲನ ಯಾಗದಿ । ಮಡಿಯೆ ಸಂತಸವೆನಗೆ ಖಚಿತ ದೃಢದಿ ||೨|| ಶೇಷನದಕೆಂದನೆಮ್ಮ । ಜನನಿ ಪರ । ದಾಸ್ಯದಲಿಯಿಹುದೆ ತಮ್ಮ || ಹೇಸಿಕೆಯು ಮನಕೆನ್ನಲು । ತಕ್ಷಕನು । ರೋಷಗೊಂಡೆಂದವನೊಳು ||೩||

ರಾಗ - ಸೌರಾಷ್ಟ್ರ - ತ್ರಿವುಡೆತಾಳ

ಪೆತ್ತವಳ ದಾಸ್ಯವನು ನಾವು ವಿ । ಮುಕ್ತಿಗೈದರೆ ಕೊಟ್ಟ ಶಾಪಕೆ । ಮತ್ತವಳು ಹಿಂತೆಗೆವಳೇ ಚೇ । ರತ್ನವಿಹುದೆ ||೧|| ಮಾತೆಯಭಿಮತದಂತೆ ನಡೆದರೆ । ಮಾತ ಮನ್ನಿಸದಿರುವಳೇನೈ । ಜಾತರಳಿವನು ಬಯಸುವಳೆ ಪಡೆ । ದಾಕೆ ಜಗದಿ ||೨|| ಅಬ್ಬರಿಸುತುಸುರಿದ ಧನಂಜಯ । ಅರ್ಭಕರೊಳೆಳ್ಳಷ್ಟು ಮಮತೆಯು । ಉದ್ಭವಿಸದಾಕೆಯಲಿ ಕರುಣೆಯೊ । ಳುಬ್ಬಲೇಕೆ ||೩|| ಸಣ್ಣ ತಪ್ಪಿಗೆ ಶಪಿಸಿದಾಕೆಯು । ಚಿಣ್ಣರಳಿವನು ಕಾಣುವಾಶೆಯು । ನಿರ್ಣಯವು ಇಹುದೆಂದನೋರ್ವನು । ಬಣ್ಣಗುಂದಿ ||೪||

ರಾಗ - ಕೇತಾರಗೌಳ - ಅಷ್ಟತಾಳ

ಏಲಾಪತ್ರಾದಿ ಕಾರ್ಕೋಟಕರೆಂದರು । ಪೇಳಿದ ಶಾಪದಂತೆ || ಭೂಲಲಾಮನ ಯಾಗದಲಿ

Scanned by CamScanner

ನಾಶವಾಗಲಿ । ಆಲೋಚಿಸುವದೇತಕೆ ॥೧॥ ಜನನಿಯ ದಾಸ್ಯ ಬಂಧನವ ನೀಗುವದೊಂದ । ಘನಕಾರ್ಯಕೊದಗಿ ನಾವು ॥ ತನಯರು ದಣಿಯುವದಿನಿತೊಳ್ಳಿತೆನಲು ಕೇ । ಷನು ವೇಳ್ವನಕುವರ್ಗಕೆ ॥೨॥ ಕಪ್ಪಿನ ಹಾವ್ಗಳು ತಪ್ಪದೆ ಪೋಗಿ ಮ । ಹಪ್ರಸಾದವಿದೆನುತ್ತ ॥ ಬಪ್ಪ ಹಯದ ಬಾಲಕೊಪ್ಪಿ ಕೂದಲಿನಂತೆ । ಇಪ್ಪದು ನಾಳಿನಲಿ ॥೩॥ ಮಾತೆಯು ಬರುವಾಗ ಆತುರದಿಂ ನೀವು । ರೀತಿ ದೂರದಿ ನೋಡಿರಿ । ಘಾತಕವೆಸಗದಿರೆಂದು ಮಹಾ ಶೇಷ । ಪ್ರೀತಿಯಿಂ ಕಳುಹಿದನು ॥೪॥

ಭಾಮಿನಿ

ಮರು ದಿವಸ ಕರಿದಾದ ಸರ್ಪಗ । ಳಿರದೆ ಸುರ ವಾರುಹದ ಬಾಲಕೆ । ನೆರದು ತೋಲಾಡುತ್ತ ಕೂದಲಿನಂದದಿಂದಿರಲು ॥ ಮರುಕದಿಂದಲಿ ಕದ್ರು ವಿನತೆಯು । ಕರಕೊಳುತ್ತ ಘವಾಕ್ಷ ತಡಿಯೊಳು । ಭರದಿ ನಿಂದಿರೆ ದಿವ್ಯ ಹಯ ನಡೆತರಲು ಗಗನದಲಿ ॥೧॥

ರಾಗ - ಪಂತುವರಾಳಿ - ರೂಪಕತಾಳ

ನೋಡು ವಿನತೆ ಗಗನ ಮಾರ್ಗದಿ । ದಿವ್ಯಾಶ್ವ ಬಾಲ । ಕೂಡಿರುವದು ಕರಿಯ ವರ್ಣದಿ ॥ ಆಡಿದ ಬಿರುನುಡಿಯ ನಿನ್ನ । ಮಾಡಿ ಪಂಥವ ಮೋಹನ್ನೆ । ಗಾಢ ಗರ್ವವೆಲ್ಲಿ ಹೋಯ್ತು । ಬಾಡಿದೇಕೆ ವದನವಿನಿತು ॥೧॥ ಬಿಳಿಯ ವರ್ಣವಿಹುದೆ ಬಾಲದಿ । ಮತ್ಸರದಿ ನೀನು । ಕಳವಾನ್ಯಯಾದೆ ಲೋಕದಿ ॥ ಬಲು ಬಲಿಷ್ಟ ಸುತನ ಪಡೆದು । ಫಲಿಸಿತೆನ್ನ ಸೇವೆಯೊಲಿದು । ನಲವಿನಿಂದಲೆಸಗಿ ಬಾಳು । ತಿಳಿವರಾರು ನಿನ್ನ ಗೋಳು ॥೨॥

ವಾರ್ಧಿಕ್ಯ

ನಾನೆಂದ ತೆರದಿ ನೀ ಹೊತ್ತು ತಿರುಗುವುದೆನ್ನ । ಸೂನುಗಳ ಚಾಕರಿಯನೆಸಗಿ ಮನೆಗೆಲಸವಂ । ಸಾಮದಾಗದೊಳೆಸಗಿ ಬಾಳೆನಲು ಮರುಮಾತನಾಡದತಿ ಸೇವೆಯಿಂದ ॥ ಮಾನಿನಿಯು ದಣಿಯುತ್ತ ಹೀನತನಿಂ ಕಡೆಯಾಗಿ । ಪ್ರಾಣಮಾತ್ರದೊಳಿರ್ದು ಪಡುದಿಕ್ಕಿಗಯ್ತರದೆ । ತ್ರಾಣಗುಂದಿದಳಾಕೆ ದಿನ ದಿನವು ತನ್ಮನದಿ ಮರುಗುತ್ತಲಿಂತೆಂದಳು ॥೧॥

ರಾಗ ಸಾಂಗತ್ಯ ರೂಪಕತಾಳ

ಹರಿಯೇ ಮಾರಮಣನೆ ಬರಿದೆ ಪಂಥವ ಮಾಡಿ । ನಿರತ ಕದ್ರುವಿನ ಸೇವೆಯಲಿ ॥ ಇರುವ ಹಾಗಾಯಿತೆ ಅರುಣನ ಶಾಪವು । ಸರಿಯಾಯ್ತು ಮುಂದೇನ ಗೈವೆ ॥೧॥ ವಿಧಿಯೆನ್ನ ಘಳಿಯೊಳ್ಪರೆದನ್ನಾತಕೀ ರೀತಿ । ಯಿದುವೆನ್ನ ಪ್ರಾಚೀನ ಕರ್ಮ ॥ ಉದಿಸಿದ ಸುತನೊಬ್ಬನಧಿಕ ವೀರನು ಕಾಲಿ । ಲ್ಲದವನಾದನು ಚಕ್ರಧರನೆ ॥೨॥ ಹಿಂದಿನ ಭವದೊಳಿನ್ನಾರ ದಂಡಿಸಿದೆನೊ । ಒಂದರಿಯದ ಬಾಲಕರನು ॥ ಕೊಂದೆನೊ ಹಿಂಸೆಯಗೈದಿರ್ದಡಾ ಶಾಪ । ಬಂದು ಪೀಡಿಪುದೊ ನಾಮಿಯೆ ॥೩॥ ಪಶ್ಚಿಮಾಬ್ಧಿಯ ದೂರದಂಡವಿನ್ನೊಂದಿದೆ । ಎಚ್ಚರದಿಂ ಕಾಯ್ವರಿಲ್ಲ ॥ ತುಚ್ಛಳ ಸೇವೆಯಿಂ ಮುಕ್ತಿಯಾಗುವ ದಾರಿ । ಯಚ್ಯುತಾನಂತನೆ ಬಲ್ಲ ॥೪॥

ವಾರ್ಧಿಕ್ಯ

ಈ ತೆರದಿ ದಿನದಿನವು ಶೋಕಿಸುತ ಸೇವೆಯಲಿ । ಧಾತ್ರಿಯೊಳಗೈನೂರು ವರುಷಗಳು

ಕಳೆಯಲ್ಕೆ । ಚೇತನದಿ ಬಲಿತಂಡವೊಡೆದು ಸಿಡಿಲಿನ ರವದಿ ಮಿಂಚಿನ ಪ್ರಕಾಶದಿಂದ ॥ ನೂತನ ಸ್ವರೂಪ ಕಾಮಗದರ್ಪ ರೂಪ ನಿ । ರ್ಭೀತ ಸಾಸಿರ ಶೇಷರಿಂದ ಬಲಯುತನಗ್ನಿ । ನೇತ್ರಾಕೃತಿಯ ವಿಶ್ವಭರಿತಂ ಮಹಾಕಾಯದಿಂ ಜನಿಸುತಿಂತೆಂದನು ॥೧॥

ರಾಗ ಮಾರವಿ ಏಕತಾಳ

ಏನಸ್ಟುತ ಜಠರಾಗ್ನಿಯ ಮಹಿಮೆಯ । ತಾನರಿಯೆನು ಜಗವ ॥ ಜೀರ್ಣಿಪೆ ಭುಂಜಿಸಿ ಕಾಣುವ ಶರಧಿಯ । ಪಾನವ ಮಾಡುವೆನು ॥೧॥ ನುಂಗುವೆ ಪರ್ವತ ಭಂಗಿಪೆ ಜೀವರ । ಕಂಗಾಣದು ಎನಗೆ ॥ ಮುಂಗಡೆ ಚರಿಪ ಪತಂಗನ ತೇಜಕೆ । ಭಂಗವನೆಸಗುವೆನು ॥೨॥ ಮಾತೆಯು ಎಲ್ಲಿಹಳ್ಪಾತನ ಕಾಣೆನು । ಯಾತಕೆ ಬಲುಹೆನಗೆ ॥ಮಾತಾಡದೆ ಲೋಕತ್ರಯ ತಿಂಬೆನೆಂ । ದಾತ ಪೊರಟನಾಗ ॥೩॥

ರಾಗ - ಸಾದನಾಮಕ್ರಿಯೆ - ಅಷ್ಟತಾಳ

ಸಿಕ್ಕಿದುದನು ಮುಕ್ಕಿ ಖಗರಾಜ । ಮೇ । ಲಕ್ಕೆ ಹಾರುತ್ತಿರೆ ಶಿಖಿತೇಜ ॥ ದಿಕ್ಕೆಲ್ಲವದುರಿ ಕಂಪಿಸಲಂದು । ಜ್ವಾಲೆ । ಯುಕ್ಕೇರುತಿಂದ್ರ ಭೀತಿಯಗೊಂಡು ॥೧॥ ಅಗ್ನಿ ಪ್ರಕೋಪವಿದೆನ್ನುತ । ಸುರ । ರನ್ನೊಡಗೂಡಿ ಮಹಾದ್ಭುತ ॥ ವಿಘ್ನವಾಯಿತೆ ಲೋಕಕೆನ್ನುತ । ಚಿಂತಾ । ಮಗ್ನದಿಂದನಲನ ಕಾಣುತ ॥೨॥ ನುಡಿದ ವೈಶ್ವಾನರ ನೀನಿಂತು । ಲೋಕ । ಸುಡುವೆಯಾತಕೊ ಪೇಳು ಖತಿಯಾಂತು ॥ ಕೆಡಿಪೆಯ ಉರಿಯ ತಡೆಯೆವೆಂದು । ಸುರ । ರೊಡೆಯನೊರೆಯಲೆಂದ ಭಯಗೊಂಡು ॥೩॥

ರಾಗ ಬಿಲಹರಿ ಅಷ್ಟತಾಳ

ದೂರದಿರೆಲೊ ಇಂದ್ರ ಸದ್ಗುಣ ಸಾಂದ್ರ । ಮೂರು ಲೋಕಕೆ ಹಾನಿ ಯಾರ್ಯ್ಯೊಬ್ಬನಿಂದ ॥ ಧಾರಿಣಿಯಲಿ ವಿನತೆಗೆ ಸುತನುದಿಸಿ । ಸೂರೆಗೊಂಬನು ಜಗತ್ರಯವನ್ನೆ ಭುಜಿಸಿ ॥೧॥ ಮಾತೆ ಬಳಿಯೊಳಿಲ್ಲ ಕದ್ರು ಸೇವೆಯಲಿ । ತಾ ತೊಳಲುವಳು ವಿಧಾತಗೆ ಪೇಳಿ ॥ ಖ್ಯಾತ ಮೌನಿಗಳೊಡಗೂಡುತ್ತ ಖಗನ । ಸ್ತೋತ್ರದಿ ಮನ್ನಿಪುದೆಂದೆಲ್ಲರೊಡನ ॥೨॥

ರಾಗ - ಮಧ್ಯಮಾವತಿ ತ್ರಿಪುಡೆತಾಳ

ತ್ರಿದಶರೆಲ್ಲರು ವಿಧಿಯೊಳರುಹುತ । ಮುದದಿ ಮುನಿಗಳ ನೆರಹಿ ಬರುತಲಿ । ಹದವ ಮೀರಿದ ಖಗನ ಪೂಜಿಸಿ । ವಿಧ ವಿಧದಿ ಕೈ ಮುಗಿವುತ । ಭಕ್ತಿಯಿಂದ ॥೧॥ ಪ್ರಾರ್ಥಿಸಿದರಹಿ ವೈರಿ ರಾಕ್ಷಸ । ಘಾತಕನೆ ಕಾಶ್ಯಪನ ನಂದನ । ಧಾತ್ರ ಶಿಖಿ ಪವಮಾನ ರೂಪನೆ । ಚೇತನನೆ ಖಗ ರಾಜನೆ । ಜಯತು ಜಯತು ॥೨॥ ಭೀತಿಯಾಂತಿಹೆ ಲೋಕವೆಲ್ಲವು । ಖಾತಿಗೊಳ್ಳದೆ ಸೂಕ್ಷ್ಮಕಾಯದಿ । ಪ್ರೀತಿಯಿಂದಭಯವನು ಪಾಲಿಸು । ನೀತಿಯುತ ಸುಜ್ಞಾನಿಯೆ । ಗರುಡ ದೇವ ॥೩॥ ಎಂದು ಸಕಲರು ಪಾದ ತಳದಲಿ । ನಿಂದು ಕಾಣಿಕೆಯಿತ್ತು ಪ್ರಾರ್ಥಿಸೆ । ಮುಂದೆ ಕಾಯವ ಕುಗ್ಗಿಸುತ್ತಲಿ । ನಿಂದಭಯವಿತ್ತೆಲ್ಲರ । ಕರೆದು ಪೇಳ್ದ ॥೪॥

ರಾಗ ಕೇತಾರಗೌಳ ಝುಂಪೆತಾಳ

ಕುಂಜರ ವರೂಥ ಮುಖ್ಯ । ಸುರರೆ ನೀ । ವಂಜದಿರಿಯೆನ್ನನೈಕ್ಯ ॥ ದಿಂ ಜವದಿ

Scanned by CamScanner

ಸ್ವಾತಿಪ್ರದಂತೆ । ಭಯ ಪಡದ । ಸಂಚರಿಸಿ ತೊಡರಾಯಿತೆ ॥೧॥ ಮನು ಮುನಿಗಳತ್ತ ವಿಧಿಯ । ಕರಕೊಂಡು । ಇನುತು ಮಣಿಸುವರಿಗೈಯ ॥ ಪನು ಕೊಡಲು ಕಿರಿದಾಕೃತಿ । ಧರಿಸ್ಯೆ । ಮನಗುಂದದಿರಿ ಸದ್ಗತಿ ॥೨॥ ತಾಳಿ ನೀವೆನ್ನ ಕಾಯ । ತಿಳುಹಿದರೆ । ಪಾಲಿಸುವೆ ನಿಮ್ಮ ಧ್ಯೇಯ ॥ ಮೂಲೋಕ ದಹಿಪ ಬಲವು । ವಿನ್ನೊಳಿದೆ । ಪೇಳರೆನಲೆಂದರೊಳವು ॥೩॥

ರಾಗ - ಕೇತಾರಗೌಳ - ಅಷ್ಟತಾಳ

ಹೀನ ಪಂಥದಿ ಕದ್ರು ಚಾಣಾತನದಿಗೆದ್ದು । ತಾ ನಿತ್ಯ ಸೇವೆಯಲಿ ॥ ಹೀನ್ಯೆಸಿ ದಣಿಪಳು ವೈನತೇಯನೆ ನಿನ್ನ । ಧ್ಯಾನದಿಂದಿಹಳವ್ವೆಯು ॥೧॥ ಪೂರ್ವ ಸಾಗರದಾಚೆಗೋರ್ವರೆಣಿಸದಂಥ ಉಪಿಗೊಯ್ಯುವಳಾಕೆಯ ॥ ನೀವರಿತಾ ದಾಸ್ಯದಿಂ ವಿಮುಕ್ತಿಯ ಮಾಡು । ಕಾವ ಶ್ರೀವರ ನಿನ್ನನು ॥೨॥ ಪ್ರಾಣಪೂರಿತರಹ ಸೇನೆಗಳಲ್ಲಿದೆ । ಸೂನುಗಳ್ ಕದ್ರುವಿಗೆ ॥ ಪ್ರಾಣಗೊಂಬರು ಪೋಪ ಚಾಣತನವದೆಂತೊ । ಕಾಣೆವೆಂದೆಸಲೆಂದನು ॥೩॥

ರಾಗ - ಮಾರವಿ - ಏಕತಾಳ

ಜನನಿಯ ಕದ್ರುವು ದಣಿಸುವಳಾಕೆಯ । ತನಯರನೆಲ್ಲರನು ॥ ಕ್ಷಣಮಾತ್ರದಿ ತಿಂಬೆನು ಎನ್ನವ್ವೆಯ । ಮನಕೆ ಸರಸಗೊಳಿಪೆ ॥೧॥ ಅಕ್ಷಯ ಬಲಯುತನಿಬ್ಬಾಗಮನನು । ಪಕ್ಷಿ ಸಜೀವರಲಿ ॥ ಲಕ್ಷ ಭವಾಂಡದೊಳಾಕ್ಷೇಪಿಸುವರು । ತಕ್ಷಣ ನಡೆತರಲಿ ॥೨॥ ಗಣ್ಯವೆ ಸಕಲವ ಮಣ್ಣಗಿಕ್ಕುವೆನು । ಎನ್ನಯ ತಾತನನು ॥ ಕಣ್ಣಲಿ ಕಾಣುವೆನೆನ್ನುತ ನಡೆದನು । ಪೂರ್ಣ ಬಲಾನ್ವಿತನು ॥೩॥

ಕಂದ

ಅಂಬರದಲಿ ಸುಳಿದರಸುತ । ಕುಂಭಿನಿಯಲಿ ತಪವಗೈವ ಜನಕನ ಕಂಡಾ ॥ ತುಂಬಿದ ಹರುಷದಿ ಪಾದದಿ । ಕಂಬನಿ ಸುರಿಸುತಲಿ ಪೇಳ್ದ ತನ್ನಭಿಮತವಂ ॥೧॥

ಭಾಮಿನಿ

ಜಯ ನಮೋ ಕಶ್ಯಪ ಪ್ರಜಾಪತಿ । ಜಯ ನಮೋ ತಪನಿರತ ಯತಿ ಪತಿ । ಜಯ ನಮೋ ಶಿವರೂಪ ಸಾತ್ವಿಕ ಗುಣಕೃಪಾಕರನೆ ॥ ಜಯ ನಮೋ ಸುಜ್ಞಾನ ಮೂರುತಿ । ಜಯತು ವೈರಾಗ್ಯಾಧಿಪತಿ ಜಯ । ಜಯ ನಮೋಯೆಂದೆನಲು ಕಣ್ದೆರೆದೆಂದ ನಂದನಗೆ ॥೧॥

ರಾಗ - ಮಾಧ್ಯಮಾವತಿ - ತ್ರಿವುಡೆ ತಾಳ

ಮಗನೆ ಬಾ ಬಾರೈ ಸುಪರ್ಣನೆ । ಗಗನ ಭರಿತ ಸ್ವರೂಪ ಕುವರನೆ । ಜಗದಿ ದೀರ್ಘಾಯುಷ್ಮನಾಗೈ । ನಗಧರನ ಸುಪ್ರೀತಿಗೆ । ಪಾತ್ರನೆನಿಸಿ ॥೧॥ ಖಗ ಕುಲಾಧಿಪನಾಗು ಸರ್ಗ । ಲಗೆ ವಿರೋಧಿಯುಯೆನಿಸಿ ಲೋಕದಿ । ಸುಗುಣ ಭಕ್ತರ ಪೊರೆದು ಪೆತ್ತವ । ರಿಗೆ ಸುಕೀರ್ತಿಯನಾಶಿಸು । ಮಗನೆ ಮುಂದೆ ॥೨॥ ಜನ್ಮದಾತನೆ ನಿನ್ನ ತಪಫಲ । ಖಿನ್ನನಾಗಿಹ ಅರುಣನು । ಚಿಣ್ಣಗಾಶೀರ್ವಚನವಾಯಿತು । ಧನ್ಯತಾನೆಂದೆನಲು ಹರುಷದಿ । ...

ರಾಗ - ಬೇಗಡೆ - ಅಷ್ಟತಾಳ

ಹತ್ತಿರಕೆ ಬಾರಿತ್ತ ಖಗನಾಥ । ವಿನತಾಂಗನೆಗೆ ಹರಿ । ಪುತ್ರ ನಾ ಸುಪವಿತ್ರನನುಜಾತ ॥ ಪೆತ್ತವನು ತಪಕಿತ್ತ ಸಾರಲು । ಮತ್ತೆ ಮಾತೆಯು ಪೂರ್ತಿ ಬಲಿಯದ । ನೆತ್ತರಂಡವನೊತ್ತಿದಳು ಮನ । ಮತ್ಸರಿಸಿ ಕದ್ರುವಿನ ಸುತರಲಿ ॥೧॥ ಹೆಳವನಾಗುತ್ತಿಳೆಗೆ ಜನಿಸಿದೆನು । ಖತಿಯಿಂದ ಮಾತೆಗೆ । ಮುಳಿದು ಶಪಿಸಿದೆ ಲಲನೆ ಕದ್ರುವನು ॥ ಒಲಿದು ಬಾಳೆಂದಳುತಿರಲು ನೀ । ಬಲಿದು ಜನಿಸಲು ತಳುವದಯ್ಯುತ । ಬಲು ಸುಭಾಗ್ಯದಿ ನೆಲೆಗೊಳಿಪನೆಂ । ದೊಲಿದು ತಾತನ ಬಳಿಗೆ ಬಂದಿಹೆ ॥೨॥ ನಾರಿ ಕದ್ರುವು ತೋರ್ದ ಪಂಥದಲಿ । ನಾ ಶಪಿಸಿದಂದದಿ । ತೀರದೆಯೆ ಬಳಿ ಸೇರಿ ದಾಸ್ಯದಲಿ ॥ ದಾರಿಗಾಣದೆ ಗಾರುಗೆಡುತ್ಯೆ । ನೂರು ವತ್ಸರ ತೀರಿತವ್ವೆಯ । ಪಾರ ಕಷ್ಟವ ಪಾರುಗಾಣಿಸು । ಪೂರ್ವ ಶರಧಿಯ ಮೇರೆಯಲ್ಲಿಹ ॥೩॥

ಕಂದ

ಅರುಣನ ಮರುಕದ ನುಡಿಗಳ । ಗರುಡನು ಕೇಳ್ದಾಗ ಧೈರ್ಯವಂ ತಾಳ್ದಾಗಂ ॥ ಪರಿಭವವಿನಿತಾಯ್ತೆನ್ನುತ । ಲೊರೆದಂ ಶೌರ್ಯಾದಿ ಕೆರಳ್ದು ಕಳೆದುದ ನೆನೆದುಂ ॥೧॥

ರಾಗ - ಸೌರಾಷ್ಟ್ರ - ತ್ರಿವುಡೆತಾಳ

ಪೂರ್ವಭವ ದುಗುಡಗಳ ಬಿಡು ಬಿಡು । ಮೀರ್ವರುಂಟೇ ವಿಧಿಯ ನಿಯಮವ । ನೂರ್ವಿಯಲಿ ನೀ ಹೆಳವನಾದರು । ಸರ್ವಭರಿತ ॥೧॥ ಗರುಡ ನಾನಿಹೆ ನಿನ್ನನುಜ ಭುಜ । ವೆರಡರಲಿ ಹೊತ್ತೊಯ್ದು ಸಲಹುವೆ । ದುರಿತ ಪರಿಹರಿಸಲ್ಕೆ ಕಲ್ಪಾ । ಗಿರುವೆನಣ್ಣ ॥೨॥ ಕದ್ರುವಿನ ಸೇವೆಯಲಿ ಬಾಳುತ । ಲಿರ್ದ ಜನನಿಯ ಬಿಡಿಸಿ ತರದಿರೆ । ಒದ್ದು ದಂಡಿಸು ನೀನು ದಿಟವಿದು । ರುದ್ರನಾಣೆ ॥೩॥ ಎಂದು ತಂದೆಗೆ ನಮಿಸಿ ಜ್ಯೇಷ್ಠನ । ನಂದು ಪೆಗಲೊಳಗಿರಿಸಿ ಗರುಡನು । ಮುಂದ್ವರಿದ ಮಾತೆಯನು ಕಾಣಲು । ಇಂದ್ರದೆಸೆಗೆ ॥೪॥

ಕಂದ

ತೆರಳುತ್ತಿರೆ ವಿನತೆಯ ಸುತ । ಭರದಿಂದಿತ್ತಲು ಪ್ರಭಾಕರ ಶಶಿಯರೊಳು ಹಗೆ ॥ ಧರಿಸುತ್ತ ರಾಹು ಖತಿಯಲಿ । ಪೊರಟಾ ಕೇತುವನು ತನ್ನ ಬಳಿ ಕರೆದೆಂದಂ ॥೧॥

ರಾಗ - ಕೇತಾರಗೌಳ - ಅಷ್ಟತಾಳ

ವಾರಿಧಿ ಮಥನದಿ ಸೂರ್ಯಚಂದ್ರರು ನಮ್ಮ । ತೋರುತ್ತ ಮೋಹಿನಿಗೆ ॥ ಶ್ರೀ ರಮಾಧವ ಕಂಠ ಹಾರಿಸಿದನು ಸುರ । ವಾರ ಪಾಲಿಪ ಬಗೆಗೆ ॥೧॥ ಆದ ಬಿಡು ನಾವಂದು ಸುಧೆಯುಂಡ ಕಾರಣ । ವಧೆಯಾಗದೆರಡಾದೆವು ॥ ಹದಗೆಟ್ಟು ಮಥನದಿ ಒದಗಿದ ಭಾಗ್ಯವು । ತ್ರಿದಶರ ವಶವಾಯಿತು ॥೨॥ ಹರಿ ಹರರಾಜ್ಞೆಯೊಳಿರುವೆವು ಗ್ರಹರಾಗಿ । ಸುರರು ಸ್ನೇಹಿತರಾದರು ॥ ಹರಿಯ ಚಕ್ರಕೆ ದೇಹವೆರಡಾಗಲ್ಕಾರಣ । ತರಣಿ ಚಂದ್ರಮರೀರ್ವರು ॥೩॥ ಹೋಗಿ ನಾವೀರ್ವರು ತೇಗುವ ತಿಂದು ಹಾ । ಈಗಲಿ ಲೋಕವೆಲ್ಲ ॥ ತಾಗುವೆ ಶಶಿಗೆ ನಾನೀಗ ಸೂರ್ಯನ ಸತ್ವ । ನೀಗಿಸು ತೆರಳಿ ನೀನು॥೪॥ ಎಂದು ಮಾತಾಡುತ್ತಲಂದೀರ್ವರ್ ಪಶ್ಚಿಮ । ಕಿಂದ್ರದೆಸೆಗೆ ಸಾರಲು ॥ ನೊಂದ ಮಾರ್ತಾಂಡನು ಗೆಂದುವಗ್ನಿಯ ತೆರ । ದಿಂದ ಚಂದ್ರನೊಳೆಂದನು ॥೫॥

Scanned by CamScanner

ರಾಗ - ಭೈರವಿ - ಏಕತಾಳ

ಮಾತನು ಕೇಳು ಶಶಾಂಕ । ರಾಹು । ಕೇತುಗಳೀರ್ವರು ಬಿಂಕ ॥ ಖ್ಯಾತಿಯೊಳ್ತೋರಲು
ಬಹರು । ಸೇ । ಡಾಯ್ತಬ್ಧಿಯ ಮಥನದೊಳು ॥೧॥ ಭೀತಿಯ ಬಿಡು ಮಾರ್ತಾಂಡ । ಹುಲು ।
ಕೇತುವು ಬರಲಾ ಮುಂಡ ॥ ಶೀತಳದಿಂ ಬರಿಗೊಳಿಪೆ । ಇನ । ಜಾತನೆಡೆಗೆ ಪಥ ತೋರ್ಪೆ ॥೨॥
ದಹಿಸುವೆ ರಾಹುವ ನಾನು । ಕು । ಗ್ರಹರನು ಕೊಲದಿರಲಿನ್ನು ॥ ಬಹುದು ಕಷ್ಟವಡಿಗಡಿಗೆ ।
ನಾವ್ । ಸಹಿಸುವದೆಂತೀ ಬಗೆಗೆ ॥೩॥ ಸುಧೆಯುಣ್ಣುವ ದಾನವನ । ತೋ । ರಿದೆವಾವ್ ಶ್ರೀ
ಹರಿಯೊಡನಾ ॥ ತ್ರಿದಶರ ಸಲಹಲು ಎಣಿಸಿ । ನಮ । ಗೊದಗರು ಕಷ್ಟವನೆನಿಸಿ ॥೪॥
ಬಂದುದನಿದಿರಿಪುದೆಂದು । ಆ । ಚಂದ್ರನು ಪೊರಮಡುತಂದು ॥ ಹೊಂದಿ ಶೀತದಿಂ
ಮರೆಯ । ಸುರ । ವೃಂದವು ಭೀತಿಯ ತಳೆಯೆ ॥೫॥

ರಾಗ - ಸೌರಾಷ್ಟ್ರ - ತ್ರಿವುಡೆತಾಳ

ಕಿಡಿಗೆದರಿ ಭಾಸ್ಕರನು ಲೋಕವ । ಸುಡುವೆ ಬ್ರಹ್ಮಾಂಡವನು ರಾಹುವ । ತಡೆಯದುರಿಸುವ
ನೀಗೆನುತ ಪೊರ । ಮಡಲು ಭರದಿ ॥೧॥ಸರ್ವ ಶಕ್ತಿಯ ಬೀರಿ ಕೆಂಡದೊ । ಲಿರ್ವನಿನ
ನಡುರಾತ್ರಿಯೊಳಗೆ ಸು । ಪರ್ವರಳುಕುತ್ತಿರಲು ಇತ್ತಲು । ಉರ್ವಿಯೊಳಗೆ ॥೨॥

ವಾರ್ಧಿಕ್ಯ

ಸತ್ತುದಾ ವೃಕ್ಷತತಿ ಬತ್ತಿತು ಸರೋವರವು । ತತ್ತಳಿಸೆ ಖಗ ಮೃಗಗಳತ್ತ ಉರಿದಾಹದಿಂ
ಪೃಥ್ವಿಯಲಿ ಜನರೆಲ್ಲ ಸ್ವಸ್ತರಾಗಿರೆ ಮುನಿಗಳತ್ಯಧಿಕ ಭೀತಿಯಿಂದ ॥ ಮತ್ತರ್ಧ ರಾತ್ರಿಯಲಿ
ನಿತ್ತಲ್ಲಿ ನಿಲಲರಿಯ । ದತ್ತ ಬಸವಳಿದು ದಿವಿಜೋತ್ತಮನ ಬಳಿಗಯ್ದಿ । ಮಿತ್ರನುರಿ
ಮಿಗಿಲಾಯ್ತೆನುತ್ತ ಬಲು ಭೀತಿಯಲಿ ವೃತ್ರಾರಿಗಿಂತೆಂದರು ॥೧॥

ರಾಗ - ಮಧ್ಯಮಾವತಿ - ಏಕತಾಳ

ಲಾಲಿಸಿ ಕೇಳೆಮ್ಮ ಮಾತನೀ ಸಾರಿ । ಕಾಲವು ವಿಪರೀತವಾಯ್ತು ಗೋತ್ರಾರಿ ॥ ಪ॥
ನಡುರಾತ್ರಿಯೊಳಗೆಮ್ಮ ಪೊಡವಿಯೊಳ್ನಿಲ್ಲಲು । ಎಡೆಯಿಲ್ಲ ಸೂರ್ಯನ ಕಡುತಾಪದಿಂದ ॥
ಉಡುಗಿ ಕಾಲುವೆ ನದಿಯಡವಿ ಸಂಪದ ಪೋಗಿ । ನಡೆಯಲಾಗದೆ ಕಷ್ಟವಡಸಿದುದೆಮಗೆ ॥
ಲಾಲಿಸಿ ॥೧॥ ಸ್ನಾನ ಜಪಗಳಿಲ್ಲ ಪಾನಡಿಗೆಗಳಿಲ್ಲ । ಮಾನವರಲಿ ಹೋಮ
ನೇಮಗಳಿಲ್ಲ ॥ ಭಾನುವಿಂದಾದ ಮಹೋನ್ನತ ತಾಪಕೆ । ನೀನೊಂದು ದಾರಿಯ ಕಾಣಿಸು
ಜೀಯ ॥ ಲಾಲಿಸಿ ॥೨॥

ರಾಗ - ಕಾಪಿ - ಅಷ್ಟತಾಳ

ಎನ್ನಿಂದಾಗುವುದೆ ಈ ಕಾರ್ಯ । ಮುನಿವ । ರೇಣ್ಯರೆ ತೆರಳಿ ನಾವೆಲ್ಲರು ವಿಧಿಯ ॥
ಸನ್ನಿಧಿಯಲಿ ಪೇಳಿ ತಪನ । ಶಾಂತ । ವನ್ನೆಸಗುವ ರೀತಿಯೊಳ್ಳಿತು ಮುನ್ನ ॥೧॥ ರಾಹು
ಕೇತುಗಳೊಳು ಸಿಟ್ಟು । ತಾಳ್ದ । ರಾಹುಗೆಡಿಸಲಿನ ಜ್ವಲಿಪನಿಂದಿಷ್ಟು ॥ ಹಾಹಾಕಾರವು
ಜನಕಾಯ್ತು । ನಿ । ರ್ವಾಹವಜನು ಮಾಳ್ಪ ತೆರಳುವದಿನಿತು ॥೨॥

ಕಂದ

ಎಂದಾ ಮುನಿಗಳ ಜತೆಯೊಳು । ವೃಂದಾರಕರೊಡನೆ ಶಕ್ರ ಕಮಲಜನೆಡೆಗಂ ॥
ಬಂದೆಲ್ಲರು ಪದಕೆರಗುತ । ಒಂದೇ ಮನದಿಂದ ಪೇಳ್ದರತಿ ನುತಿಸುತ್ತಂ ॥೧॥

ರಾಗ - ತೋಡಿ - ಏಕತಾಳ

ಜಯತು ಕೃಪಾವರಣ । ಮರಾಳ ಗಮನ । ಜಯತು ಭಾರತಿ ರಮಣ ॥ ದಯದಿಂ ಭಕ್ತ
ನಿ । ಚಯವನು ಪರಿಕಿಸಿ । ದಯವಿಡು ಲೋಕದ । ಭಯವ ನಿವಾರಿಸು ॥೧॥ ಉದ್ರೇಕಗೊಂಡು
ಸೂರ್ಯನು । ಸುಡುವ ಲೋಕ । ಮಧ್ಯರಾತ್ರೆಯೊಳೆಮ್ಮನು ॥ ನಿದ್ರಿಸಲ್ಬಿಡನುರಿ । ದೆದ್ದು
ಜಗತ್ರಯ । ವರ್ಧಕ್ಷಣದಿ ಲಯ । ಹೊದ್ದುವ ತೆರವಿಹ ॥೨॥

ವಾರ್ಧಿಕ್ಯ

ಮನು ಮುನಿಗಳನಿಮಿಷರು ಮನ ಕರಗಿ ಪೇಳುತಿರೆ । ವನಜಭವ ಕೇಳ್ದೆಂದ ಪೇಳ್ವೆ
ಪರಿಹಾರಮಂ । ವಿನತೆಯರ್ಭಕನೋರ್ವ ಹೆಳವರುಣ ಜನಿಸಿರ್ಪನವನಲ್ಲಿ ಗಮಿಸಿ ತಿಳುಹಿ ॥
ಇನಗಡ್ಡ ನಿಂದವನ ಸೂತತ್ವ ಸ್ವೀಕರಿಪ । ಮನಕೊಡಂಬಡಿಪೆ ಸೂರ್ಯನ ಜ್ವಾಲೆಯಡಗುವದು ।
ದಣೆಯದಿರಿ ನೀವೆಂದು ಗರುಡನಿರುವೆಡೆ ಬಂದು ಅರುಣಂಗೆ ಪೇಳ್ದರಂದು ॥೧॥

ರಾಗ - ಅಸಾವೇರಿ - ಏಕತಾಳ

ರಕ್ಷಿಸಾರ್ತದ್ಯಕ್ಷ ನೀನೆ । ಅರುಣ ದೇವ । ನಮ್ಮಾ । ಪೇಕ್ಷೆಗಳನಾಕ್ಷೇಪಿಸದೆ । ಅರುಣ
ದೇವ ॥ ಈಕ್ಷಿಸು ಪರೋಕ್ಷದಿಂದ । ಅರುಣ ದೇವ । ಲಕ್ಷ । ಲಕ್ಷ ಜೀವರ್ಗೆಚ್ಚರಿಲ್ಲ । ಅರುಣ
ದೇವ ॥೧॥ ದಹಿಪ ಜ್ವಲಿಸಿ ಮಿಹಿರನಿಳೆಯ । ನರುಣ ದೇವ । ಎರಡು । ಗ್ರಹರ ಕೊಲದೆ
ಸಹನೆಯಿಲ್ಲ । ವರುಣ ದೇವ ॥ ಮಹಿಯೊಳಾಯ್ತು ಬಹಳ ಕಷ್ಟ । ವರುಣ ದೇವ । ಅದಕೆ ।
ಗ್ರಹಿಸಿ ತವ ಸನ್ನಿಧಿಯ ಸೇರ್ದೆ । ವರುಣ ದೇವ ॥೨॥ ತರಣಿಯುರಿಯ ಮರೆಯೊಳಿರಿಸು ।
ತರುಣ ದೇವ । ರಥದೊ । ಳಿರುತ ನಿರತ ಸರಿಸುದ್ಧರಿಸು । ಅರುಣ ದೇವ ॥ ಚರಣ ಶರಣ ನೆರವಿ
ಪೊರೆಯೊ। ಅರುಣ ದೇವ । ಎಂದು । ಅರುಹುತಿರಲು ಕರೆವುತೊರೆದ । ನರುಣ ದೇವ ॥೩॥

ಭಾಮಿನಿ

ಆ ತಪನನುರಿಯಿಂದಲೆಲ್ಲರು । ಧಾತ್ರಿಯಲಿ ಬಳಲುವಿರೆ ಬಿಡಿ ಭಯ । ಸೂತತನವಂ
ವಹಿಸಿ ಜ್ವಾಲೆಯನೆನ್ನೊಳಡಗಿಸುತ ॥ ಘಾತವಾಗದ ತೆರದಿ ಪಾಲಿಪೆ । ನೀವ್ತೆರಳಿರೆಂದವರ
ಕಳುಹುತ । ಲಾತತೂಕ್ಷಣ ರವಿಯ ಸ್ಯಂದನವರುಣನೇರಿದನು ॥೧॥

ರಾಗ - ಭೈರವಿ - ಝುಂಪೆತಾಳ

ನುಂಗಿ ಸೂರ್ಯನ ತೇಜ । ಹಿಂಗದರುಣನು ಜಗಕೆ । ಮಂಗಳವ ಗೈದ ಸಾ । ಪ್ಯಾಂಗ
ನಿಮಿಪರಿಗೆ ॥೧॥ ಜನವೆಲ್ಲ ಮುದಗೊಳಲು । ಅನಿಮಿಷರು ಜಯವೆನಲು । ವನ ಚಿಗುರಿ ನದಿ
ಕೊಳದಿ । ಮಿನುಗೆ ಜಲ ಜಗದಿ ॥೨॥ ಇತ್ತ ರಾಹುವು ರೋಷ । ವೆತ್ತು ಬಂದಾ ರವಿಯ। ತುತ್ತು
ಗೊಂಬೆನೆನುತ್ತ । ಹತ್ತಿರಕೆ ಬರಲು ॥೩॥ ಹೆಳವತ್ವದಿಂ ರಥದಿ । ಕುಳಿತು ಸೂತತ್ವ ಕೈ ।

Scanned by CamScanner

ಚಳಕದಿಂದರುಣ ಗೆ । ಯಲು ಚೋದ್ಯಗೊಂಡು
ನಿನ್ನೆಲ್ಲಿಯಡಗಿಹನೊ । ಇನ್ನೊಂದು ದಿನ ಪಿಡಿವೆ । ನೆನ್ನುತಲಿ ನಡೆದ ||೫||

ಭಾಮಿನಿ

ಇಚ್ಛೆ ಬಂದೆಡೆ ಚರಿಪ ಖಗಪತಿ । ಯಾಕ್ಷಣವೆ ಬೀಳ್ಕೊಂಡು ಜ್ಯೇಷ್ಠನ । ಪೇಕ್ಷೆಯಂದದಿ ಪೂರ್ವ ಸಾಗರದಾಚೆಯನು ಸೇರಿ ॥ ಈಕ್ಷಿಸಲು ಭೀತಿಯೊಳಗಹಿಗಳು । ರಕ್ಷಕಿಯ ಮರೆ ಸೇರಿ ಕದ್ರುವು । ಅಚ್ಚರಿಯ ತಾಳ್ದವನ ಪರಿಕಿಸುತಿರಲು ದೂರದಲಿ ||೧||

ರಾಗ - ಸಾಂಗತ್ಯ - ರೂಪಕತಾಳ

ಕಂಡನಾ ಗರುಡನವ್ವೆಯು ದೇಹ ದಂಡಿಪ । ಛುಂಡಾಡಿ ಕದ್ರು ಪೇಳ್ದಂತೆ ॥ ಪಿಂಡಿ ವಸ್ತ್ರವ ತೊಳಕೊಂಡು ಬಾರೆಂದಾಕೆ । ಮಂಡೆಗೆ ಟೊಣೆದು ದೂಡಿದಳು ||೧|| ಮರುಗಿದಳ್ತನ್ನೊಳು ಹಗಲಿರುಳೆನ್ನದೆ । ನಿರತ ದಂಡಿಪಳೆನ್ನ ಕಟುಕಿ ॥ ತರಳನುದಿಸಿ ಬಂದು ಅರುಣನ ಶಾಪದ । ಪರಿಹಾರವೆಂದಿಗಿನ್ನಹುದೊ ||೨|| ಉರುಳಿದುದೈನೂರು ವರುಷ ನಾನಿಲ್ಲಿರ್ದು । ಕಿರಿದಂಡವಲ್ಲಿಯೇನಾಯ್ತೊ ॥ ಹರಿಯೆ ಬಲ್ಲನೆನುತ್ತ ಮರುಗಲು ಜನನಿಗೆ । ಎರಗಿದ ಗರುಡನಯ್ತಂದು ||೩||

ರಾಗ - ಸೌರಾಷ್ಟ್ರ - ಅಷ್ಟತಾಳ

ಚಿಂತಿಸದಿರು ತಾಯೆ ಕಿರಿಕಂದ ನಾನಿತ್ತ । ಬಂದೆನಮ್ಮ । ಅಂಡ । ದಿಂತುದ್ಭವಿಸಿ ನಿನ್ನ ನರಸುತ್ತಲೀ ಕಡೆ । ಬಂದೆನಮ್ಮ ॥ ಸಂತೈಸಿ ಸುರರೆನ್ನ ಕಳುಹಲು ಪೊರಮಟ್ಟು । ಬಂದೆನಮ್ಮ ಪಿತ । ನಿಂ ತಿಳಿದೆಲ್ಲವಣ್ಣನ ಕಂಡು ನುಡಿಸುತ್ತ । ಬಂದೆನಮ್ಮ ||೧|| ಹಿರಿಯವ್ವೆ ನಿಮ್ಮನು ದಣಿಪ ರೀತಿಯ ಬಲ್ಲೆ । ತಾಯೆ ಕೇಳು । ದೇವ । ಹರಿಯ ಪಂಥದಿ ಯತ್ನದಲಿ ಗೆದ್ದುದರಿತಿಹ ತಾಯೆ ಕೇಳು ॥ ತರಳನು ನಾನಿಹೆ ಪೇಳಿ ನಿಮ್ಮಯಭೀಷ್ಟ । ತಾಯೆ ಕೇಳು । ಪರಿ । ಹರಗೈ ದಾಸ್ಯ ವಿಮುಕ್ತಿಗೆ ಪಥವೇನು । ತಾಯೆ ಕೇಳು ||೨||

ವಾರ್ಧಿಕ್ಯ

ಈ ರೀತಿಯಿಂದ ಮಾತಾಡುತಿರೆ ಕೇಳುತ್ತ । ಕ್ರೂರೆ ಕದ್ರುವು ಗರುಡಗರೆಗಣ್ಣಿನಿಂ ನೋಡಿ ನಾರಿ ವಿನತೆಯೊಳೊರೆದಳೆಲೆಯೆನ್ನ ಪೊತ್ತು ನಾಗಾಲಯಕೆ ಪೋಗಲ್ಲದೆ ॥ ಯಾರಿವನು ನಿನ್ನ ಸುಕುಮಾರ ಮಮ ಸುತರಿಂದ । ನೂರು ಸಾವಿರ ಬಲನೆ ಬಡಹಕ್ಕಿ ಬಾರೀಗ । ಆ ರಾಮಣೀಯ ದ್ವೀಪಕೆ ಎನ್ನ ನಂದನರ ಕೊಂಡೊಯ್ಯೊ ನೀ ದಣಿಸದೆ ||೧||

ರಾಗ - ಕೇತಾರಗೌಳ - ಅಷ್ಟತಾಳ

ವ್ಯಥಿಸುತ್ತ ವಿನತೆಯು ಕದ್ರುವ ಪೆಗಲೊಳು । ಅತಿ ಬೇಗ ಕುಳ್ಳಿರಿಸಿ ॥ ಪೃಥಿ ಸಂಚರಿಸುತ್ತಲೊಯ್ಯುತಿರ್ದಳು ಆಕೆ । ಮತದಂತೆ ಬಳಲುತಲಿ ||೧|| ಗರುಡ ಪಕ್ಕದ ಮಧ್ಯಕೆ ಸರ್ಪಗಳನ್ನು । ಸರಿದು ನಭೋನ್ನತಕೆ ॥ ತರಣಿಯ ಹತ್ತಿರ ಸರಿಯೆ ತಾಪದಿ ಪನ್ನ । ಗಗೋಳಿಡುತ್ತೆಂದರು ||೨|| ಗರುಡ ನೀನೀ ವಿಧವೊಯ್ದರೆ ಮಿತ್ರನ । ಉರಿಯಿಂದ ಸಾಯ್ವೆವಯ್ಯ

ಧರಣಿಗೆ ಸಮನಾಗಿ ಕರಕೊಂಡು ಹೋಗೆಮ್ಮ । ಹರಣವುಳಿಸು ದಮ್ಮಯ್ಯ ||೩ || ಗರಳದಣ್ಣಗಳಿರ ಎನ್ನ ಮಾತೆಗೆ ಭಂಗ । ಬರಿಸಿದ ಕರ್ಮಫಲ ॥ ಸರಿಯಾಗಿ ಅನುಭವಿಸಿರಿ ನಿಮ್ಮವ್ವೆಯ ಮಾತು । ಶಿರಸಾವಹಿಸುತೊಯ್ವೆನು ||೪|| ತಾಯ ಕರೆವುತೆಂದರಂಬರದಿಂದೆಮ್ಮ । ನೊಯ್ಯಲರುಹಿಯುವಗೆ॥ ಸೂರ್ಯನ ತಾಪದಿಂದಾಯಾಸಗೊಂಡು ನಾವ್ । ಸಾಯುವೆವಮ್ಮ ನೋಡು ||೫||

ಭಾಮಿನಿ

ಪುತ್ರರಾರ್ತನಿನಾದ ಕೇಳುತ । ಪೆತ್ತವಳು ವಿನತಾತ್ಮಜನೆ ಕೇ । ಳಿತ್ತ ಬಾಲರ ಕೊಲದಿರೆನೆ ಕೇಳದವನಂದದಲಿ ॥ ಮತ್ತತೆಯೊಳೊಯ್ಯಲ್ಕೆ ಕೆಲವರು । ಸತ್ತು ಬೀಳುತ್ತಿರಲು ಭಯದಲಿ । ಯುಕ್ತಿಯರಿಯದೆ ಧ್ಯಾನಿಸುತಲಿಂದ್ರಂಗೆ ಮೊರೆಯಿಡಲು ||೧||

ರಾಗ - ಪೀಲು - ಅಷ್ಟತಾಳ

ಶರಧಿ ಗಭೀರನು ಸುರಪಾಲ ನೀನೆ । ಚರಣ ಶರಣರನ್ನು ಪೊರೆವಾತ ನೀನೆ ॥ ನರರಿಗಾಧಾರ ಸಚ್ಚರಿತನು ನೀನೆ । ಸರುವ ಸಂಪನ್ನ ಸಂಪದವೀವ ನೀನೆ ||೧|| ಗರುಡನೊಯ್ವೆನ್ನ ಬಾಲಕರನು ನಭದಿ । ತರಣಿಯುರಿಗೆ ಸಾಯುತಿರುವರಾಯಸದಿ ॥ ಸುರಿಸಿ ಮಳೆಯ ಕುವರರ ಜೀವವುಳಿಸು । ಕರುಣ ಸಾಗರನಾಗಿ ತಳೆವೆಯ ಮುನಿಸು ||೨||

ಭಾಮಿನಿ

ನೀನು ಮುನಿದರೆ ಮಾನವರ ಪಾ । ಡೇನು ಲೋಕಾಧಾರ ಕರ್ತನೆ । ಮಾನಿತನೆ ಜಗವಂದ್ಯನೇಕ ಮಖಾಧಿಪತಿಯೊಲಿದು ॥ ಕಾಣಲಾರೆನು ಸುತರು ಮಡಿವುದ । ನೀನೊಲಿದು ಸಲಹದಿರಲೆನ್ನಯ । ಪ್ರಾಣ ನಿನಗೊಪ್ಪಿಸುವೆನೆಂದಳು ಸುರಿಸಿ ಕಣ್ಣಲವ ||೧||

ರಾಗ - ಸೌರಾಷ್ಟ್ರ - ತ್ರಿವುಡೆತಾಳ

ರೋದನವ ಕೇಳ್ದಾ ಪುರಂದರ । ಮೇದಿನಿಗೆ ಬರಗಾಲವಾದುದೆ । ಚೋದಿಗವಿದೇನೆಂದರಿತ ಜ್ಞಾ । ನೋದಯದಲಿ ||೧|| ಗರುಡನಾಟದಿ ಫಣೆಗಳೆಲ್ಲರು । ತರಣಿಯುರಿಯಿಂ ಸಾಯುತಿರುವರು । ಮೊರೆಯಿಡುವ ಕದ್ರುವಿಗೆ ಸಂತಸ । ಬರಿಪೆನೆನುತ ||೨|| ಕರೆದು ಸುರರಿಂಗೆಂದ ಸಂಕಲೆ । ಹರಿದು ಮೇಘವ ಬಿಡಿರಿ ಈ ಕ್ಷಣ । ಸುರಿಯಲ್ಕೆ ಮಳೆಯೊನಕೆ ಗಾತ್ರದಿ । ಧರೆಗೆ ಬೇಗ ||೩|| ಭಾನು ಶಶಿಗಳ ತಾಪ ನಿಲುವೋ । ಲಾ ನಿಧಾನದಿ ಮಳೆಯು ಸುರಿಯಲಿ । ಕ್ಷೋಣಿ ಜಲಮಯದಿಂದ ತೋರಲಿ । ಕಾಣುವರಿಗೆ ||೪|| ಗರುಡನಬ್ಬರ ಕ್ಷೀಣವಾಗಲಿ । ಉರಗರಿಗೆ ಸಂತೋಷವಾಗಲಿ । ಮರುಕ ತೊರೆಯಲಿ ಕದ್ರುವೆಂದಾ । ಸುರಪನಿರ್ದ ||೫||

ವಾರ್ಧಿಕ್ಯ

ದಿವಿಜೇಂದ್ರನಾಜ್ಞೆಯಿಂ ಮೇಘ ಸಂಕಲೆ ಕಡಿದು । ಜವದಿ ಬಿಡಲಾ ಸುರರು ಕಾರ್ಮುಗಿಲು ಮಿಂಚಿನಿಂ । ಭುವನ ಕಂಪಿಸೆ ಹಗಲು ಇರುಳಾಗಿ ತೋರ್ದು ಮಳೆ ಸುರಿಯಲೊನಕೆಯ ಗಾತ್ರದಿ ॥ ಸವನಿಸಲು ತಂಪು ಫಣೆಗಳು ಸರಸದಿಂದಿರಲು । ಅವನಿ ಜಲಮಯವಾಗಿ ನಿಲಲು ನೆಲ ಸಿಗದಿರಲು । ತವಕದಿಂ ಕದ್ರುವಿತ್ತಾಜ್ಞೆಯಲಿ ರಾಮಣೀಯಕ ದ್ವೀಪದೆಡೆಗಯ್ದರು ||೧||

Scanned by CamScanner

ಭಾಮಿನಿ

ವಿಶ್ವಕರ್ಮನ ನಿರ್ಮಿತದಿ ಸೊಗ । ಸಚ್ಚರಿಯು ತದ್ವೀಪ ಶೋಭಿಸೆ । ಸ್ವೇಚ್ಛೆಯಿಂ ವಿಹರಿಸುತಲುರಗಾದಿಗಳು ಮೆರೆದಿರಲು ॥ ದುಶ್ಚರಿತ ಮಧು ದೈತ್ಯ ನಂದನ । ರಾಕ್ಷಸಾಗ್ರಣಿ ಲವಣ ದಾನವ । ನೆಚ್ಚರಿಂತು ಉದಯದೊಳಗೋಲಗವಿತ್ತು ಸಭೆಗೆಂದ ॥೧॥

ರಾಗ - ಕಾಂಬೋದಿ - ಝಂಪೆತಾಳ

ಏನೆಂಬೆ ಸೌಭಾಗ್ಯವಂ ನಗಧರನ ಪೋಲ್ವ । ತಾನಿರ್ಪ ಶಿವ ಭಜಕನಾಗಿ ॥ ಜಲ ನೆಲದ ಕ್ಷೋಣಿಯೊಳಗೆನಗೆ ಸರಿಗಾಣೆ ಶೌರ್ಯದಲಿ ಗೀ । ರ್ವಾಣರಂಜುವರಧಟುತನಕೆ ॥ ನೆಲಸಿರುವದಪರಿಮಿತ್ರ ಪಥದಿ ಬರಲುಳಿಯರೀ ದ್ವೀಪದಲಿ । ಬಲು ಕ್ರೂರ ಮೊಸಳೆ ಕರ್ಕಟರು ॥ ಪೆಸರೆತ್ತಲಂಜುವರು ನುಸುಳಿ ಬಳಿಕಂಬರದಿ ಬರಲು । ಗೆಲುವಧಟು ಎನಗಿರಲು ಮತ್ತಾ ॥೨॥ ವಿಷ ಜಂತುಗಳ ಕಂಡು ಬಸವಳಿದು ಬಹರಿಲ್ಲೆಂದು । ಅಸುರ ಪೇಳುತಿಹ ವೇಳ್ಯದಲಿ ॥ ಚಾರಕರು । ಉಸುರಿದರು ಲವಣಾಸುರಂಗೆ ॥೩॥

ರಾಗ - ಮುಖಾರಿ - ಏಕತಾಳ

ದಾನವಾಗ್ರಣಿಯೆ ಲಾಲಿಸಯ್ಯ । ಲವಣಾಸುರಾಖ್ಯ । ನೀ ನೋಡು ದ್ವೀಪ ಸುಳಿದು ಜೀಯ ॥ ನಾನಾ ವರ್ಣದೊ । ಳಾ ನಾಗಗಳತಿ । ದಾಣವ ಗೈದರು । ಸಾವಿರ ಕಡೆಯಲಿ ॥೧॥ ಒಂದು ಮೂರ್ಕದೇಳು ಸಹಸ್ರ । ತಲೆಗಳಿಂದ । ಹೊಂದಿರ್ಪ ಕೇಸರಿ ವಿಚಿತ್ರ ॥ ಕಂದು ಕಪ್ಪು ಬಿಳಿ । ಯಿಂದ ಕಿರಿದು ಮಾ । ರೊಂದರಿಂದ ನೂ । ರೊಂದ್ಯೋಜನಕಿದೆ ॥೨॥ ಹೆಡೆಯೆತ್ತಿ ಬರುವವು ಬುಸುಗುಟ್ಟಿ । ಹೊಡೆವಾಗದೃಶ್ಯ । ಪಡುತ ಮತ್ತೊಂದೆಡೆ ತಲೆಯೆತ್ತಿ ॥ ಕಡು ವಿಷ ಕಾರುವ । ತಡೆದರು ಕೊಲ್ಲುವ । ದೃಢ ಕಾಯದೊಳೀ । ಪೊಡವಿಯ ತುಂಬಿದೆ ॥೩॥ ಮತ್ತೊಂದಿವರ ಹೊರುವ ಹಕ್ಕಿ । ಭೀಕರವಿಹುದು । ಮತ್ತೊಬ್ಬಳಂಗನೆ ಮದವುಕ್ಕಿ ॥ ತೊತ್ತಿಯ ಹೆಗಲೊಳು । ಹತ್ತಿ ಕುಳಿತು ಚರಿ । ಸುತ್ತಿಹರಾಟ ವಿ । ಚಿತ್ರವು ನೋಡೈ ॥೪॥

ಕಂದ

ಇಂತೆಂದಾ ಚರರಂ ಖಳ । ಕಾಂತಂ ನಾ ನೋಳ್ಪೆನೆಂದು ಕಳುಹಿಸುತಾಗಂ ॥ ಅಂತಕನಂದ ಗರ್ಜಿಸಿ । ಮಂತ್ರಿಯ ಕರೆಯಲ್ಕೆ ಪೇಳ್ದ ದೊರೆಗೆರಗುತ್ತಂ ॥೧॥

ರಾಗ - ಸೌರಾಷ್ಟ್ರ - ತ್ರಿವುಡೆತಾಳ

ದ್ವೀಪಪಾಲನೆ ಕರೆಸಲೆನ್ನಪ । ರೂಪ ದುರ್ಘಟ ಭವಿಸಿತೇನೈ । ವ್ಯಾಪಿಸಿತೆ ದುರ್ಯಶ ಮಾಡು ನಿ । ರೂಪವೆನಗೆ ॥೧॥ ಸಾಗರಾಂಬರ ವೊಂದೆಸಗುವೆನು । ಯೋಗಿಗಳ ನಿರ್ನಾಮಗೈವೆನು ಹೋಗಿ ಸ್ವರ್ಗವನಿಳಿಪೆನಿಲ್ಲಿಗೆ । ಬೇಗ ತಿಳುಹೈ ॥೨॥ ಕೇಳು ಮಕರಾಸುರನೆ ನಾವತಿ । ತೋ ಭಟರಾಗಿರ್ದು ದ್ವೀಪದಿ । ವ್ಯಾಳರಾಲಯಗೈದು ಸುಖದಿಂ । ಬಾಳ್ವರಂತೆ ॥೩॥ ಬಂದರೇನಾಯ್ತುದ ನಾಲ್ದೆಸೆ । ಯಿಂದ ಶಿಬಿಯಂ ಕಳುಹಿದರೆ ಭಯ । ಮುಂದಕಿಲ್ಲಿದೆ ಪಾಲಿಸಾಜ್ಞೆಯ । ಕೊಂದ ಬಹೆನು ॥೪॥ ತೆರಳಿ ನೀ ಫಣಿಗಳ ಸಮೂಹವ । ತರಿದು ಬಾರೆಂದೆನುತ ಕಳುಹಲು । ಧರ ಸಕಲಾಯುಧವ ಸಮರಕೆ । ಪೊರಟನಾಗ ॥೫॥

ಭಾಮಿನಿ

ನೆರಹಿ ಮಾರ್ಬಲ ಸಹಿತ ಬಂದಾ । ದುರುಳ ನಾಲ್ದೆಸೆಯಿಂದ ಪಕ್ಷಿಯ । ತರುಬಿ ತರ ತರದಾಯುಧದಿ ಮುತ್ತಿದಡೆ ರಾಕ್ಷಸರು ॥ ಗರುಡನಂಬರದಿಂದ ನೀರ । ನ್ನೆರಚಿ ಶಿಬಿಯನು ನಂದಿಸುತ ದಿತಿ । ಜರನು ವಾರ್ಧಿಯೊಳಿಡಲು ತಕ್ಷಕ ಮಕರ ಮುಖಗೆಂದ ॥೧॥

ರಾಗ - ಭೈರವಿ - ಅಷ್ಟತಾಳ

ಮಕರಗಳೊಡೆಯ ನೀನು । ಉರಿಯನಿಕ್ಕಿ । ಸಕಲರ ಗೆಲಿವದೇನು ॥ ಸುಖವಿಲ್ಲವೀ ಧುರ ಮುಖಕೆ ಮುಸುಕನಿಕ್ಕಿ । ವಿಕೃತಿಯೆ ಪೋಗೆಂದನು ॥೧॥ ಮೊದಲು ನೀವ್ ಬಂದಿಲ್ಲಿಗೆ । ನಮ್ಮಧಟಿಗೆ । ಬೆದರಿ ಪೋದವರಿಂದಿಗೆ ॥ ಒದಗಿ ಬರಲು ಬೆಂಬಲದೊಳಗ್ಯಾರಿಹರಯ್ಯ । ತುದಿಗಾಲವಿದು ನಿಮಗೆ ॥೨॥ ಫಣಿಗಳ ಕೆಣಕಿದರೆ । ಹಗೆಯು ಮನ । ಮುನಿಸಾಗಿ ನಿಲಲು ಖರೆ ॥ ಜನುಮಾಂತರವು ಬಿಡದನವರತವು ಕಷ್ಟ । ವನುಭವಿಸುವೆಯ ನಡೆ ॥೩॥ ಬದುಕಿ ನೀವುಳಿದಾದರೆ । ನಮಗೆ ದೋಷ । ಒದಗುವದದಕೆ ಬೇರೆ ॥ ಹದನ ಗೈಯುವೆನೆಂದು ಅಧಿಕ ಕೂರ್ಗಣೆಗಳ । ಬೆದರದೆಸೆವ ವೇಳೆಗೆ ॥೪॥

ಕಂದ

ತಿಳಿಯುತ ಬಂದಾ ಗರುಡಂ । ಅಲಗಂ ನುಂಗುತಲಿ ತಕ್ಷಕನ ನಭಕೊಯ್ಯಲ್॥ ಬಲು ಕ್ರೋಧದಲಿ ಧನಂಜಯ । ಮುಳಿದಡಹಾಯ್ದಾ ಖಳೇಶಗಿದಿರಿಸುತೆಂದಂ ॥೧॥

ರಾಗ - ಮಾರವಿ - ಏಕತಾಳ

ಉರಗಗಳಂ ಸಂಹರಿಸುವ ಹವಣವು । ಹರಿಯದು ನಿನಗಧಮ ॥ ಭರಿತ ಬಲಬುರ್ಜದವಿರುವೆವು ಚರಣ । ಕೈರಗಿ ಬಾಳು ಮುನ್ನ ॥೧॥ ಜಾರಿದರ್ಕಲವರು ಹಾರುವೆ ನೀನತಿ । ಸೇರಿ ನಮ್ಮೂರಿನಲಿ ॥ ಮಾರಿಯ ಬಾಯಿಗೆ ತೂರಿದಂತಾಯಿತು । ಸಾರುವದಿನ್ನೆಲ್ಲಿ ॥೨॥ ಮೂಗಿನವರೆ ಸುರೆ ತೇಗಿ ಕುಡಿದು ಮತಿ । ನೀಗಿ ಬಾಯ ಬಿಟ್ಟು ॥ ಕೂಗುತ ಬೀಳುವ ಗೂಗೆ ಸಮಾನರು । ರೇಗಿದರಿನ್ನೆಷ್ಟು ॥೩॥ ಬಾಲ ಪಿಡಿದು ನೆಲದೋಳ್ಬಡಿದರೆ ಯಮ । ನಾಲಯ ಗತಿ ನಿಮಗೆ ॥ ತಾಳಹುದೆನ್ನುತ ಕೋಲ ಮಳೆಯ ಬಿರು । ಗಾಳಿಯ ವೋಲೆಸೆಯ ॥೪॥ ಅಂಜದೆ ನುಂಗಿ ಧನಂಜಯನನು ಗರು । ಡಂ ಜವದಿಂದೊಯ್ಯೆ ॥ ನಂಜನುಗುಳಿ ಕಾರ್ಕೋಟಕನೆಂದ ಪ್ರ । ಭಂಜನನಂದದಲಿ ॥೫॥ ಲವಣಾಸುರನ ಸಚಿವ ನೀನೆಲೊ ದ್ವೀ । ಪವ ರಕ್ಷಿಸುವಾತ ॥ ಭವನ ನಿನಗೆ ತೋರುವೆ ಶಾಶ್ವತವದು । ಜವನೂರಲಿ ಧೂರ್ತ ॥೬॥

ರಾಗ - ಸೌರಾಷ್ಟ್ರ - ತ್ರಿವುಡೆತಾಳ

ಕಲಹ ಮಧ್ಯದಿ ಬಂದು ನಿಮ್ಮನು । ಕಳವಿನಿಂದೊಯ್ಯುವವನ್ಯಾರವ । ತಳುವದಾತನ ಕಳುಹು ನಿಮ್ಮಲಿ । ಸಲುಗೆಯೇನು ॥೧॥ ಹರಿ ವಿರಿಂಚಾದಿಗಳಿಗಂಜದ । ಧುರ ಪರಾಕ್ರಮಿ ಸುರರ ಗಣಿಸದ । ಗರುಡನೆಮ್ಮ ಸಹೋದರನು ಬರೆ । ತರಿವ ಖಳರ ॥೨॥ ಒದರದಿರು ಪಕ್ಷಿಗಳೊಳವ ಬ । ಲ್ಲಿದನೆನಿಸೆ ನಮಗೇನು ಗಣ್ಯವು । ಅಧಿಕ ಬಲನಾಗಿರಲು ಮರೆಯಲಿ । ಹುದುಗಿದ್ಯಾಕೆ ॥ ೩॥

Scanned by CamScanner

ಭಾಮಿನಿ

ತೋರುವೆನು ನಾನವನನೆನ್ನುತ । ಹಾರಿ ಟೊಣೆಯುವದರಿತು ರಕ್ಷಸ । ಕೂರಸಿಯ್ಯ ಬೀಸಲ್ಕೆ ನುಂಗಿದ ವಿಹಗನಾಘಣೆಯ ॥ ಹಾರುತಂಬರಕೊಯ್ಯಲಾಕ್ಷಣ । ಮಾರುತನ ವೇಗದಲಿ ಬಂದು ವಿ । ಕಾರಿ ವಿಲಾಪತ್ರ ಗರಳವನುಗುಳಿ ಖಳಗೆಂದ ॥೧॥

ರಾಗ - ಭೈರವಿ - ಏಕತಾಳ

ಮೊಸಳೆ ಮಹಾಸುರ ನಿಲ್ಲು । ಸಾ । ಹಸ ತೋರ್ದೆನ್ನನು ಕೊಲ್ಲು ॥ ಎಸೆವಾಯುಧಗಳ ಕಾಂಬೆ । ಆ । ಶಶಿಜೂಟನ ಕರಸೆಂಬೆ ॥೧॥ಬಲು ತಲೆಯುಳ್ಳವರಹುದು । ವಿಷ । ದಲಿ ಕೊಲ್ಲುವ ಬಲವಿಹುದು ॥ ಹುಲು ರಕ್ಕಸರಾವಲ್ಲ । ಕೊಳು । ಗುಳದೊಳಗೆಮಗಿದಿರಿಲ್ಲ ॥೨॥ ಅನ್ಯರೆಣಿಸದೀ ದ್ವೀಪ । ಬಡ । ಕುನ್ನಿಗಳೊಡನೆ ಪ್ರತಾಪ ॥ ಎಣ್ಣಿಸಿ ಮಾಯದಿ ಗೆಲಿದು । ನೀವ್ । ಮಾನ್ಯರಾಗೆ ಬಿಡೆ ಮುಳಿದು ॥೩॥ ಕದನದಿ ತೋರೆಂದೆನುತ । ಖಳ । ಗದೆಯಿಡುತಿರೆ ವಿಹಗನು ತಾ ॥ ಚದುರತನದೊಳೊಯ್ಯಲ್ಕೆ । ಪೇ । ಳಿದ ವಾಸುಕಿ ರಕ್ಕಸಗೆ ॥೪॥

ರಾಗ - ಮಾರವಿ - ಅಷ್ಟತಾಳ

ಕಾಳಗ ನಿನಗೆ ಸಲ್ಲದು ಖೂಳ । ಪೋಗಿ । ಜಾಲ ಮಾರಣದಿಂದ ಜೈಸೆಲ ॥ ಮೂಲ ಬಲಗಳಿರೆ ಕಳುಹಿಸು । ನಿ । ನ್ನಾಳಿದನಿಗೆ ಧೈರ್ಯ ತಿಳುಹಿಸು ॥೧॥ ಲವಣಾಬ್ಧಿಯಲಿ ನಿಮ್ಮ ಮುಳುಗಿಸಿ । ಕುಟ್ಟಿ । ದವಡೆಯಿಂ ಪಲ್ಗಳ ಕೀಳಿಸಿ ॥ ದ್ರವ ಸುಣ್ಣವಿತ್ತು ಕೊಲ್ಲುವೆ ನಿಮ್ಮ । ವಂಶ । ಸವರುವೆ ತೋರೆಲ ವಿಕ್ರಮ ॥೨॥ ಬಡಿವಾರವಾಡಲು ದನುಜರು । ಪ್ರಾಣ । ಬಿಡುವ ತನಕ ಮುಂದುವರಿವರು ॥ ದೃಢ ಶಕ್ತಿ ತೋರೆಂದು ಸೆಣಸಲು । ಕ್ರೂರ । ಬಿಡಲು ನಾನಾಯುಧ ಕಣದೊಳು ॥೩॥

ಕಂದ

ಕಂಡಾ ಗರುಡನು ಬಲು ಶರ । ತಂಡವ ನುಂಗುತಲಿ ವಾಸುಕಿಯ ಹಿಂದಿಡುತಂ ॥ ಕೆಂಡದೊಲುರಿ ಮಸಗುತ ಫಡ । ಭಂಡನೆ ನಿಲು ನಿಲ್ಲೆನುತ್ತ ತಡೆದಿಂತೆಂದಂ ॥೧॥

ರಾಗ - ಕಾಂಬೋದಿ - ಝಂಪೆತಾಳ

ಎನ್ನ ಹಿರಿಯವ್ವೆಯಳ ಚಿಣ್ಣರನು ಗೆಲ್ಲಲು ಸು । ಪರ್ಣ ನಾ ಬಿಡೆ ರಕ್ಕಸೇಂದ್ರ ॥ ಕುನ್ನಿ ಮಕರಾಸ್ಯ ನಿನಗಿನ್ನೆಡೆಯಗೊಡೆನಿಲ್ಲಿ । ಮಣ್ಣುಗೂಡಿಪೆ ದುರ್ವಿಚಾರಿ ॥೧॥ ಎತ್ತರದಿ ಹಾರಿ ಹುಡುಕುತ್ತ ನಭದಿಂದಿಳಿದು । ಸತ್ತ ಪ್ರಾಣಿಗಳ ತಿಂಬಾತ ॥ ಧೂರ್ತ ಹಕ್ಕಿಯೆ ನಿನ್ನ ಕತ್ತ ಹಿಸುಕುತ್ತ ಖಳ । ಮೊತ್ತಕುಣಿಸುವೆ ನಿಮಿಷದೊಳಗೆ ॥೨॥ ಖೂಳ ನಿಲು ಹವಕೆಂದು ಧೂಳೆಬ್ಬಿಸುತ ಖಳನ । ಪಾಳಯವ ದೆಸೆಗೆಡಿಸುತಿವನ ॥ ಲೀಲೆಯಿಂ ಶರಧಿಗಿಡಲಾ ಲವಣ ಕಂಡು ಶರ ಜಾಲದಿಂ ಮುಸುಕುತಿಂತೆಂದ ॥೩॥

ರಾಗ - ಶಂಕರಾಭರಣ - ಮಟ್ಟೆತಾಳ

ಹಕ್ಕಿ ಬರಿದೆ ಹಾರಬೇಡ ಸಿಕ್ಕಿದೆನ್ನಲಿ । ವಿಕ್ರಮವನು ತೋರು ತೋರು ದಕ್ಕದಿಂದಿಲಿ ॥

ರಕ್ಕಸರನು ಗೆಲಿದ ನಿನ್ನ ಸೊಕ್ಕ ನಿಲಿಸುವೆ । ಮಕ್ಕಳಾಟಿಕೆಯಲಿ ದ್ವೀಪ ಹೊಕ್ಕು ಸಾಯುವೆ ॥೧॥ ಮೊಸಳೆ ಕರ್ಕಟರ ವಿಕ್ರಮದಿ ಅಸುರ ಬಾಳ್ವೆಯ । ನುಸುಳಲನ್ಯರಿಂಗೆ ಬಿಡದೆ ಅಸುವ ಹೀರ್ವೆಯ ॥ ವಿಷಮವಾಗಿ ಬಂದೆ ನಾನು ವಸತಿಗೈಯಲು । ಕುಶಲದಿ ವಂದಿಸಲು ಕಾಯ್ವೆ ಯಶದಿ ಬಾಳಲು ॥೨॥ ತಾತನೋ ಸಂಜಾತನೋ ವಿಧಾತ ನೀನೆಲ । ಧೂರ್ತ ವಿಹಗನೆನ್ನ ಪ್ರಾಣ ಕರ್ತನಾದೆಲ ॥ ಹಾತೆಗಳನು ಕೊಲ್ಲಲು ಬ್ರಹ್ಮಾಸ್ತ್ರವ್ಯಾತಕೆ । ನೀತಿಯಿಂದ ಪೋಗದಿರಲು ಘಾತಿಪೆ ಕ್ಷಣಕೆ॥೩॥ ತೋರು ಬಲುಹನೆಂದು ವಿಹಗ ಹಾರಿ ಪೊಯ್ಯಲು । ಸೇರಿ ಫಣಿಯ ವಾರ ತನ್ನ ಊರ ಮುತ್ತಲು॥ ವೀರ ಖಳರು ಕಾದುತಿರಲು ವೈನತೇಯನು । ಮಾರಿಯೊಯ್ಯುವಂತ ವಾರ್ಧಿಗೆಸೆದು ಕೊಂದನು ॥೪॥

ಭಾಮಿನಿ

ಲವಣ ಕರ್ಕಟ ಮಕರ ಪಾಳ್ಯಕೆ । ಹವಕೆ ಬರಪೇಳಿದಡೆ ಫಣಿಗಳ । ನಿವಹ ವಿಹಗರು ಕಾದಿ ಸಂಹರಿಸಲ್ಕೆ ದಿತಿಜೇಂದ್ರ ॥ ಬವರವಿವರೊಳು ತೀರದೆನ್ನುತ । ಲವಣ ಸಾಗರಕಿಳಿದು ಗುಪ್ತದಿ । ತವಕದಿಂ ಮಧುವನದೊಳಿರ್ದನು ಬಹಳ ಸೌಖ್ಯದಲಿ ॥೧॥

ವಾರ್ಧಿಕ್ಯ

ದಾನವರ ತದ್ವೀಪದಿಂ ಬೆರಸಿ ಗರುಡ ಮ । ತ್ತಾನಾಗರೊಡನೆ ಮಾತೆಯರಿರ್ದು ಕೆಲಗಾಲ । ಕಾನನವ ಗಿರಿ ಗುಹೆಯ ವನದ ಸೌಂದರ್ಯ ಕಂಡಾನಂದದಿಂ ಬಾಳಲು ॥ ತ್ರಾಣಿ ಈ ವಿಹಗನೆಂದರಿತು ಪನ್ನಗರೆಲ್ಲ । ಜಾಣತ್ವದಿಂ ಹಾನಿ ಪಡಿಸದಿರೆ ಮುಂದೆಮ್ಮ । ಪ್ರಾಣ ಹೀರುವನೊಂದು ದಿನವೆಂದು ನಿರ್ಧರಿಸಿ ವಿನಯದಿಂ ಕರೆದೆಂದರು ॥೧॥

ರಾಗ - ಕಲ್ಯಾಣಿ - ತ್ರಿವುಡೆತಾಳ

ಬಾರಿತ್ತ ಕೇಳೊ ತಮ್ಮ । ನಾವೀ ದ್ವೀಪ । ಸೇರಿ ಬಾಳಿರ್ದು ನಮ್ಮ ॥ ಭಾರಿ ದಣಿವನು ತೀರಿಕೊಂಡೆವು । ಸಾರ ಸಂಪದ ಪೂರವುಂಡೆವು । ಮೀರಿ ವರುಷವು ಜಾರಿದುದ ನಾವ್ । ತೋರದಾಯಿತು ಕಾರ್ಯ ತೀರಿತು ॥೧॥ ಎತ್ತರದಿಂ ಹಾರುತ । ಸಮಸ್ತವ । ವಿಸ್ತಾರದಿಂ ನೋಡುತ ॥ ಉತ್ತಮದ ವನ ಹತ್ತಿರದ ಬನ । ಹುತ್ತವೊಪ್ಪಿಹ ಸುಸ್ಥಳವುಯಿಹ । ವಾರ್ತೆಯನು ಗೊತ್ತರಿತು ನಮ್ಮನು । ಹೊತ್ತಿರಿಸು ಮತ್ತಲ್ಲಿ ಬೇಗದಿ ॥೨॥

ವಾರ್ಧಿಕ್ಯ

ಕೇಳ್ದಾಗ ಗರುಡ ನಾಗಾಜ್ಞೆಗಳನುಂ ರೋಷ । ಕಾಲ್ಬೆರಳಿನಿಂ ಶಿಖದ ಪರಿಯಂತವಡರೆ ಬಲು । ತೋಳ್ಬಲ ಮಹಾ ಕಾಯನಾಗಿರ್ದನಗೆ ಆಜ್ಞೆ ಕೊಡುವಧಟು ಶಿರಕಡರಿತೆ ॥ ಕೀಳ್ಬಲ ಸಹಸ್ರ ನಾಗಗಳ ವಂಶವ ಕ್ಷಣದಿ । ನೀಳ್ಬಾಲವಂ ಪಿಡಿದು ಶಿಲೆಗಪ್ಪಳಿಪೆನೆಂದು । ಕಾಲ್ಬೆರಳಿನಿಂ ಧರೆಯನಮುಕಿ ಹೂಂಕರಿಸೆ ವಿನತೆಯು ತಿಳಿದು ತಡೆದೆಂದಳು ॥೧॥

ರಾಗ - ಕಾಮವರ್ಧಿನಿ - ಅಷ್ಟತಾಳ

ಆಗದು ಮಗುವೆ ಪರಾಧೀನದೊಳಗಿರ್ದು । ಹೀಗೆ ಕೊಲ್ಲುವ ಕಾರ್ಯವು ॥ ರೇಗಿ ಕೊಳದೆ

Scanned by CamScanner

ಆವರಾಜ್ಞೆಯ ತಲೆ ಬಾಗಿ । ಈಗ ಪೂರೈಸಬೇಕು । ಆಡದೆ ವಾಕು ॥೧॥ ನೀ ವೀರನಾದರು ನಾವವರಿಗೆ ನಿತ್ಯ । ಸೇವಕರಲ್ಲವೇನ್ನೆ ॥ ಯಾವುದೆ ಪೇಳುವ ಕಾಲವಿಂದವರಿಗೆ । ನಾವ್ ಮೂಕರಂತಿಪ್ಪುದು । ಧರ್ಮಗಳಿದು ॥೨॥ ದಾಸ್ಯ ವಿಮುಕ್ತಿಯಗೊಳಿಸದೆ ಬೇರಿನ್ನು । ಲೇಶದೋರದು ದಾರಿಯು ॥ ಆ ಸರ್ಪಗಳೊಳು ಮಾತಾಡಿ ವಿನಯದಿಂದ । ಲೀ ಸೇವೆಯನು ನೀಗಿಸು । ಯತ್ನದಿ ನಡೆಸು ॥೩॥

ಭಾಮಿನಿ

ಎನಲು ನೆನೆದವ್ವೆಯಳ ಪರಿಭವ । ಮನದಿ ಬೇಗುದಿಗೊಂಡು ತಾಪದಿ । ತನಯ ಸ್ವಜತೆಗಿರ್ದು ದಾಸ್ಯ ವಿಮುಕ್ತಿ ಗೊಳಿಸದಿರೆ । ಜನಿಸಿ ಫಲವೇನೆಂದು ಮಾತೆಯ । ಕಣುಜಲವನೊರೆಸುತ್ತ ಬಳಿಕಾ । ವಿನಯದಿಂದಲಿ ಕಾದ್ರವೇಯರ ಬಳಿಗೆ ಬಂದೆಂದ ॥೧॥

ರಾಗ - ನವರೋಜು - ಏಕತಾಳ

ಕದ್ರು ಕುಮಾರರೆ ಕೇಳಿ । ಬಲು । ಬುದ್ಧಿ ಪ್ರಬುದ್ಧರೆ ತಾಳಿ ॥ ಉದ್ಧತ ಬಲರಿರ । ನಿರ್ಧರವೊಂದನು । ಇದ್ದಂತೆಯೆ ನೀವ್ । ಪೇಳ್ದರೆ ನಡೆಸುವೆ ॥೧॥ ವಿನತೆಯ ನೀವೆಲ್ಲವರು। ಅನು । ದಿನ ನೋಳ್ಪೆ ದಣಿಸಿದರು ॥ ಘನವೀ ಸೇವೆಗೆ । ಕೊನೆಯೆಂದಿಗೆಯೆಂ । ದೆನುವುದ ತಿಳುಹಿಸಿ । ರೆನಗದ ಶೀಘ್ರದಿ ॥೨॥ ಸೇವೆಯ ಲಾಭಗಳೇನು । ನೀ । ವ್ಯಾವ ಕಾಂಕ್ಷೆಗಳನ್ನು ॥ ಭಾವಿಸುವಿರಿಯೆನು । ತಾ ವಿಷಯವ ಹಿತ । ಭಾವದಿ ಪೇಳ್ದರೆ । ನಾ ವಿರಚಿಸುವೆನು ॥೩॥

ರಾಗ - ಶಂಕರಾಭರಣ - ತ್ರಿವುಡೆತಾಳ

ಒಂದು ದಿನ ನಿನ್ನವ್ವೆಯಲಿ ಕರೆ । ದೆಂದಳೆಮ್ಮಯ ಜನನಿಯು ॥ ಇಂದ್ರನಶ್ವದ ವರ್ಣವೇನೆನ । ಲೆಂದಳ್ನಿಜವ ॥೧॥ ಬಾಲ ಕಪ್ಪೆಂದೆನುತ ಕದ್ರುವು । ಮೇಲು ಪಂಥವನೆಸಗುತ ॥ ಪೇಳಿದಳು ನಮ್ಮೊಡನೆ ಕುದುರೆಯ । ಬಾಲವನ್ನು ॥೨॥ ಕರಿದು ಹಾವ್ಗಳು ನಾಳಿನಲಿ ಪಿಡಿ । ದಿರುವುದೆನೆ ಧಿಕ್ಕರಿಸಲು ॥ ಕೆರಳಿ ಶಾಪವನಿತ್ತಳಾಕೆಯು । ಕರುಣವಿಡದೆ ॥೩॥ ಮುಂದ ಸರ್ಪಾಧ್ವರದಿ ಸಾಯುವ । ದೆಂದರುಹೆ ಮರುದಿವಸದಿ ॥ ನಿಂದೆವಾ ಬಾಲದಲಿ ಜೈಸಿದ । ಳಂದು ಕದ್ರು ॥೪॥ ಮತ್ತೆ ನಾವೆಲ್ಲವರು ನಿನ್ನನು । ಪೆತ್ತವಳ ಬಲು ವಿಧದಲಿ ॥ ನಿತ್ಯ ದಂಡಿಸುತಿಹೆವ ಕೇಳಿದು । ಸತ್ಯವಯ್ಯ ॥೫॥

ಭಾಮಿನಿ

ಗರ್ವದುತ್ಸಹದಿಂದ ಪೇಳುತ । ಲಿರ್ವದಾಲಿಸಿ ಗರುಡ ಮನದಲಿ । ಶರ್ವನೋಲ್ಕಿಡಿಗೆದರ ತನು ಸ್ಫುರಿಸುತ್ತ ಮರುಗುತ್ತ ॥ ಪೂರ್ವಭವರೊಡನೆಂದ ಸೇವೆಯ । ತರ್ವಿ ಮಾತೆಯ ಬಿಡಿಸಲೋಸುಗ । ಸರ್ವರೊಂದಾಗ್ರಹವ ಪೇಳಿರೆನಲ್ಕೆ ಯೋಚಿಸುತ ॥೧॥

ರಾಗ - ಕಲ್ಯಾಣ - ಝುಂಪೆ ತಾಳ

ಗರುಡಗೆಂದರು ಸಹೋದರ ಸುಗುಣ ಸಾಂದ್ರ । ಉರಗರಭಿಮತ ವಿನತೆ ಕರುಳ ಕುಕಂದ ॥ ಪರಿಯದಾ ಕಾರ್ಯ ನೀ ವಿರಚಿಸಲು ದಾಸ್ಯ । ಭರದಿ ಬಿಡುಗಡೆಯಹುದ

ನಮಗಹುದು ಸೌಖ್ಯ ॥೧॥ ಶರಧಿ ಮಥನದಿ ದೊರೆತ ಅಮೃತವನು ತಂದು । ಕರುಣಿಸಲು ನಾವದನು ಹರುಷದಿಂ ಕುಡಿದು ॥ ಮರಣವಿಲ್ಲದೆ ಮೆರೆದು ಇರುವೆವೆನಲಾಗ । ತರುವೆನೆಂದರುಹಿ ಜನನಿಯೊಳೊರೆದನಾಗ ॥೨॥

ರಾಗ - ಜಂಜೂಟಿ - ಆದಿತಾಳ

ಕೇಳ್ ಕೇಳ್ ಜನನಿಯೆ ವ್ಯಾಳಗಳೆಂದರು । ಪಾಲಾಬ್ಧಿಯ ಮಥನದಿ ದೊರೆತ ॥ ಮೇಲಾದಮೃತವ ಪಾಲಿಸಿದರೆ ಸುಖ । ದೋಳ್ ಕಳುಹುವೆವೆಂದರು ಖಚಿತ ॥ ಕಾಲವ ಕಳೆಯದೆ ಬೀಳ್ಕೊಳಿಸಯ್ತುಹೆ । ಕೇಳಾದರೆ ಹಸಿವೆಯ ತಡೆಯೆ ॥ ಪೇಳು ಹದನವೆನೆ ಬಾಲನ ತಳ್ಕಿಸಿ । ಶೀಲೆಯೊರೆದಳ್ ಪೂರ್ವಕೆ ನಡೆಯೆ ॥೧॥ ಅಬ್ಧಿಯ ಮಧ್ಯದೊಳುಬ್ಧಕ ವರ್ಗ ಪ್ರ। ಸಿದ್ಧರಿದ್ದಪರುದ್ಧತ ಬಲರು ॥ ಹೊದ್ದಿ ಸವರ್ದುದರಾಬ್ಧಿಯ ಉರಿ ತಣಿ । ಸಿರ್ದು ಎದ್ದು ಶ್ರದ್ಧೆಯೊಳ್ ತೆರಳು ॥ ಇದ್ದ ಪ್ರಬುದ್ಧ ಸುಬುದ್ಧಿಯ ವಿಪ್ರರ । ಗುದ್ದಿ ಒದ್ದು ಮುದ್ದೆಗೆ ತಿನದೆ ॥ ಸುದ್ದಿಯನುಳ್ದು ತೆರಳ್ದು ಕಾರ್ಯ ಜಯ । ಹೊದ್ದಿ ಮುಗ್ಧ ಬಾ ವ್ಯಥೆಗೊಳದೆ ॥೨॥

ರಾಗ - ಕಮಾಚು - ಏಕತಾಳ

ಮಾತೆ ಕೇಳು ಕೈರಾತರೊಳಗೆ ಬುಧರ । ನಾ ತಿಳಿಯುವದೆಂತದರ । ಪ್ರೀತಿಯೊಳರುಹ್ವೆ ಮಾತಿನಿಂದ ವಿವರ । ಶುಭ ಲಕ್ಷಣವೇನದರ । ತಾತನಂತಿಹನೆ ಖ್ಯಾತನೆ ಶಿಖಿಯ ತೆರ ॥ ತಾ ತೋರ್ಪನೆ ಬಲು । ನೀತಿಯುತನೆ ನಿ । ರ್ಭೀತನೆ ಸೌಮ್ಯನೆ । ಧೂರ್ತನೆ ವೀರನೆ ॥೧॥ ಹೊಟ್ಟೆಗಿಳಿಯನಾ ಸೃಷ್ಟಿಯಮರ ನಿನಗೆ । ಕಂಠದಿ ಸಿಲುಕುತ ಕಡೆಗೆ । ಕಷ್ಟ ಪಡುವೆ ಬಾಯ್ ಸುಟ್ಟು ಅದಕೆ ಹೊರಗೆ । ಭುಂಜಿಸದುಗುಳ್ವೆ ಕೆಳಗೆ । ಎಷ್ಟಾದರು ಶ್ರಮಪಟ್ಟು ತಿನಲು ಕಡೆಗೆ॥ ಶ್ರೇಷ್ಠನೆ ಜೀರ್ಣಿಸ । ಲೆಷ್ಟಕು ಕಷ್ಟವು । ಇಷ್ಟದಿಂದ ಪದ । ಮುಟ್ಟಿ ನಮಿಸಿ ನಡೆ ॥೨॥

ಕಂದ

ಕಿನಿಸಿನೊಳಾದರು ವಿಪ್ರನ । ಹನನವನೆಸಗದಿರೆನಲ್ಕೆ ನಿಮ್ಮನುಮತಿಯಂ ॥ ಮನಸಾರೆ ನಡೆಸುವೆನುಯೆಂ । ದೆನುತ ಪೊರಡಲಾಶೀರ್ವದಿ ಸುತ್ತಿಂತೆಂದಳ್ ॥೧॥

ರಾಗ - ತುಜಾವಂತು - ಝುಂಪೆತಾಳ

ಹರಿ ಭಕ್ತನಾಗು ವಿಪ್ರರ ಶರಣನಾಗು । ಧರೆ ಮೂರರೊಳು ಕೀರ್ತಿ ಧರಿಸಿ ಶಾಶ್ವತನಾಗು ॥ಪ॥ ಸುಧೆಯ ತಹ ಕಾರ್ಯದಲಿ ವಿಧು ಸೂರ್ಯರೊದಗಿ ಹಿಂ । ಬದಿಯ ಕಾಯಲಿ ಅಗ್ನಿ ತಲೆಯು ರಕ್ಷಿಸಲಿ ॥ ಬದಿಯ ರೆಕ್ಕೆಗಳ ವಾಯುವು ಸಲಹುತಿರಲಿ ಕಾ । ಯದ ಪಾಲನೆಯು ಅಷ್ಟ ವಸುಗಳಲ್ಲಿರಲಿ ॥ ಹರಿಭಕ್ತ ॥೧॥ ವಿಘ್ನದ ನಿವಾರಣೆ ಗಣಾಧೀಶಗಿರಲಿ ನಾ । ಮಗ್ನಳಾಗಿರ್ಪೆ ಶಾಂತಿಯ ಮಂತ್ರದಲ್ಲಿ ॥ ಲಗ್ನವಿದು ಶುಭ ನಿನಗೆ ಪೊರಡು ಜಯ ಕಾಮಿನಿಯು । ಶೀಘ್ರ ಒಲಿಯಲಿಯೆಂದು ಪರಸಿ ಪೇಳಿದಳು ॥ ಹರಿಭಕ್ತ ॥೨॥

ದ್ವಿಪದಿ

ಮಾತೆಯಡಿದಾವರೆಗೆ ವಂದಿಸುತ ಖಗನು । ತಾತನನು ತನ್ಮನದಿ ನೆನದು ಮತ್ತವನು ॥೧॥ ದಿಗುಪಾಲರಿಂಗೆರಗಿ ಅರುಣನನು ಬೇಡಿ । ಪಗಲರಸನಿಂಗೆ ಪ್ರಣಾಮವಂ ಮಾಡಿ ॥೨॥

Scanned by CamScanner

ಹರಿಯಜಭವಾದ್ಯರಿಗೆ ಶಿರವ ಬಾಚುತ್ತ । ಸಿರಿ ಗೌರಿ ವಾಣಿಯರ ನಮಿಸಿಕೊಳ್ಳುತ್ತ ॥೩॥

ರಾಗ - ಮಾರವಿ - ಏಕತಾಳ

ಹಾರಿದ ಪದ ನೆಲಕೂರಿ ವಿಹಗ ನಭ । ಕೇರಿಸೆ ಧೂಳನು ಧಾರಿಣಿಯಲುಗುತ । ಜಾರಲು ಗಿರಿ ಬೇರು ಸಡಲಿಸಿತು ॥ ಏನನೆಂಬೆ ॥೧॥ ಕ್ರೋಧದಿ ದಿಗ್ಗಜ ಕೂರುಮನದೆಗೆಡ । ಲಾರುಭಟೆಗೆ ಗಿರಿ ಬೇರು ಸಡಲಿಸಿತು ॥ ಏನನೆಂಬೆ ॥೧॥ ಕ್ರೋಧದಿ ದಿಗ್ಗಜ ಕೂರುಮನದೆಗೆಡ । ಚೋದಿಗವಾಂತು ನಿಷಾಧರು ಖತಿಯಲಿ । ಆ ದುರುಳನ ಶಿರ ಬರಲು ಮಹೋಧದಿ ಕಂಪಿಸೆ । ಚೋದಿಗವಾಂತು ನಿಷಾಧರು ಖತಿಯಲಿ । ಆ ದುರುಳನ ಶಿರ ಬರಲು ಮಹೋಧದಿ ಕಂಪಿಸೆ ॥ ಶೌರ್ಯದಿಂದ ॥೨॥ ಕಂಡಾ ಗರುಡನು ಛೇದಿಪೆವೆನುತಲಿ । ಕಾದಲು ಬಂದರು ಕೈದುವ ಧರಿಸಿ ॥ ಶೌರ್ಯದಿಂದ ॥೨॥ ಕಂಡಾ ಗರುಡನು ಛೇದಿಪೆವೆನುತಲಿ । ಕಾದಲು ಬಂದರು ಕೈದುವ ಧರಿಸಿ । ತಂಡವ ನುಂಗಲು ಮಂಡೆಗೆ ಹಾರಿ ಪ್ರ । ಚಂಡ ಧೂಳೆಬ್ಬಿಸಿ ಕೊಂಡು ಕಿರಾತರ । ತಂಡವ ನುಂಗಲು ಒಂದಿನೊಡೆಯ ಖತಿ । ಗೊಂಡಾತನ ಮುಂಕೊಂಡು ತಡೆವುತಲಿ ॥ ಪೇಳ್ದನಾಗ ॥೩॥

ರಾಗ - ಮಾರವಿ - ಅಷ್ಟತಾಳ

ತಡೆ ನಿಲ್ಲು ಹಕ್ಕಿಯೊ ನೀನಾರು । ಗಿರಿ । ಯೊಡೆಯನೊ ಮೈನಾಕ ಕಡೆ ಸಾರು ॥ ಕಡಹಿ ತಿನ್ನಲು ನಮ್ಮ ವಂಶವ । ಭೂಮಿ । ಯೊಡೆದೊ ವಾರ್ಧಿಯೊಳೆದ್ದು ಬಂದೆಯ ॥೧॥ ಸಾವಿರ ಶೇಷರಿಂ ಬಲವಂತ । ಕಶ್ಯ । ಪಾ ವಿನತೆಯ ಸುತ ಛಲವಂತ ॥ ನಾ ವಿಹಗನು ನಿಮ್ಮನೆಲ್ಲರ। ತಿನ್ನ । ಲೀ ವಿಧ ಬಂದೆ ನಿಷಾಧರ ॥೨॥ ಮೂರ್ಲೋಕದವರೀ ಸುಸ್ಥಳವನು । ಬಂದು । ಸೇರುವದಿರಲಿ ಧ್ಯಾನಿಸರಿನ್ನು ॥ ಸಾರಿದೆ ಹೇಗೆ ಭೀಕರ ಪಕ್ಷಿ । ಬೇಗ । ಜಾರದಿರಲು ಸೀಳ್ವೆ ತವ ಕುಕ್ಷಿ ॥೩॥ ಉದರಾಗ್ನಿ ತಣಿಯದ ಹೋಗೆನು । ನಿಮ್ಮ । ಸದೆಯಲೆಂದೇ ಹುಟ್ಟಿ ಬಂದೆನು ॥ ಬದುಕಲು ನಿಮಗೆಡೆಯಿನ್ನಿಲ್ಲ । ಮಾತೆ । ಯುದರ ಹೊಕ್ಕಿರ್ದರು ಬಿಡೆ ಖಿಲ್ಲ ॥೪॥ ಎರಡನೆ ಮನುವಂಶ ಜಾತರು । ಮಧ್ಯ । ಶರಧಿಯೊಳಿಹೆ ಯೋಗಾಭ್ಯಾಸರು ॥ ಇರುವರು ವೀರರು ವಿಪ್ರರು । ನಿನ್ನ । ನುರುಹದೆ ಬಿಡರು ಬೇಗನೆ ಸಾರು ॥೫॥ ಆದಿ ಕುಲಜರೆಂದು ತಿಳಿದಿಹೆ । ನಿಮ್ಮ । ಶೋಧಿಸಿ ತಿನಲೆಂದೇ ಬಂದಿಹೆ ॥ ನಾ ದಿವ್ಯ ಕುಲಜರನಿಲ್ಲೀಗ । ನೆಲೆ । ಗೈದಪೆ ಖೂಳರ ಕೊಂದೀಗ ॥೬॥ ಎನಲು ದಿವ್ಯಾಸ್ತ್ರ ಶಸ್ತ್ರಗಳಿಂದ । ಗರು । ಡನೊಳು ಕಾದುತ್ತಿರೆ ಭರದಿಂದ ॥ ಅನಲ ದಹಿಸುವಂತೆ ತಿಂದನು । ಯಾರ । ಗಣನೆಗೆ ತಾರದೆ ಮೆರೆದನು ॥೭॥

ಭಾಮಿನಿ

ಆ ನಿಷಾಧರ ವರ್ಗವನು ಸು । ತ್ರಾಣಿ ಭುಂಜಿಸುತಿರಲು ಜಠರಕೆ । ಮಾನಿನಿಯ ಬರ್ಾಲಕರು ಸಹಿತೊಳಪೊಗಲು ಮುಂದಿರುವ ॥ ಜ್ಞಾನನಿಧಿ ಬುಧನೋರ್ವನನು ಪಿಡಿ । ದಾ ನಿಧಾನದಿ ನುಂಗುತಿರಲಾ । ಮೀನು ಗಾಳಕೆ ಸಿಕ್ಕಿ ತೊಳಲುವ ತೆರದಿ ಚಡಪಡಿಸಿ ॥೧॥

ಕಂದ

ಜನನಿಯೊರೆದ ತೆರದಿಂದಲಿ । ಅನಲನ ತೆರ ಸುಡುತಲಿಪ್ಪನಿವ ಬುಧನಹುದೆಂ ॥ ದೆನುತರಿತಾ ನಯ ವಿನಯದಿ । ಘನ ತಪ್ಪೆಸಗಿದೆನೆನುತ್ತ ಕರೆದಿಂತೆಂದಂ ॥೧॥

ರಾಗ - ನಾದನಾಮಕ್ರಿಯೆ - ರೂಪಕತಾಳ

ಪೂರ್ಣ ಬ್ರಹ್ಮನೆ । ಬ್ರಾಹ್ಮಣೋತ್ತಮ । ಮಾನ್ಯ ಲೋಕದಿ । ಅಗ್ನಿಯೋಪಮ ॥ ನಾನು

ನುಂಗಿದೆ । ನಿಮ್ಮನರಿಯದೆ । ಗೋಣು ಬಿಗಿದೆ । ಕಂಠ ಸುಡುತಿದೆ ॥೧॥ ಗಂಟಲೆಡೆಯಲಿ । ಸಿಲುಕಿಕೊಂಡೆಯ । ಅಂಟಿಕೊಳ್ಳದೆ । ಹೊರಗೆ ಬಾರಯ್ಯ ॥ ತಂಟೆ ಮಾಡೆನು । ನಿಮ್ಮ ವರ್ಗಕೆ । ಬಂಟನಾಗಿಹೆ । ವಿಪ್ರ ಬಳಗಕೆ ॥೨॥

ರಾಗ - ಸೌರಾಷ್ಟ್ರ - ಏಕತಾಳ

ಸೊಲ್ಲಿಸಿದನು ಕಂಠದೊಳಗಿಂದ ವಿಪ್ರನು । ಇಲ್ಲಿಗ್ಯಾತಕೆ ಬಂದೆ ಪೇಳಯ್ಯ ಗರುಡ ॥ ನಿಲ್ಲದೆ ಹಸಿವೆಯ ಕಳೆಯಲೆನ್ನಯ ತಾಯಿ । ಸೊಲ್ಲಿಸಿ ಪಥ ತೋರ್ದರಿಂ ಬಂದೆ ಬುಧನೆ ॥೧॥ ಬಂದೆನ್ನ ನುಂಗದೆ ಉಳಿದ ನಿಷಾಧರ । ತಿಂದು ನುಡಿಸುವದಿನ್ಯಾಕೊ ಹೇ ಗರುಡ ॥ ಮುಂದೆಚ್ಚರಿಸಿ ಮಾತೆಯೆಂದಂತೆ ನೀ ವಿಪ್ರ । ನೆಂದು ತಿಳಿದು ನೊಂದು ನುಡಿಸುವೆ ಬುಧನೆ ॥ ೨ ॥ ಎಂತು ತಿಳಿದೆ ಬ್ರಾಹ್ಮಣೋತ್ತಮ ನಾನೆಂದು । ಶಾಂತನಾಗಿಹುದೇಕೆ ಪೇಳೀಗ ಗರುಡ ॥ ನಾಂ ತಿನಲಿದರೊಳು ಸುಡುವ ಕಾರಣದಿಂದ । ಲಿಂತರಿತೆನು ನಿಜ ನೀ ಬಾರೊ ಬುಧನೆ ॥೩॥ ಮೊದಲೆನ್ನ ಸತಿಯ ನುಂಗಿದರಿಂದವಳ ಬಿಟ್ಟು । ಮುದದಿ ಬರುವನಲ್ಲ ದಿಟವಿದು ಗರುಡ ॥ ಉದರದೊಳಿಹ ನಿನ್ನ ಸತಿಯನರಸಿಕೊಂಡು । ಬೆದರದೆ ಬಾ ನಮಿಸುವೆನಯ್ಯ ಬುಧನೆ ॥೪॥

ಭಾಮಿನಿ

ಗರುಡನಾಡಿದ ದಿಟದ ಮಾತಿಗೆ । ಅರಸಿಯನು ಕರಕೊಂಡು ಭೂಸುರ । ಹೊರಗೆ ಬರಲವರಿಂಗೆ ವಂದಿಸಿ ಕ್ಷಮೆಯ ಯಾಚಿಸುತ ॥ ತ್ವರಿಯದಿಂದಲಿ ಸುಧೆಯ ತರುವರೆ । ಪೊರಟಿಹೆನು ಎನ್ನಪ್ಪೆ ದಾಸ್ಯವ । ಹರಿಪ ಬಗೆಗಾಶೀರ್ವದಿಪುದೆನೆ ಹರಸಿ ಕಳುಹಿಸಲು ॥೧॥

ರಾಗ - ಕಾಂಬೋದಿ - ಝಂಪೆತಾಳ

ಹರಕೆಯಂ ಕೈಗೊಂಡು ಬರುತಂಬರದಿ ಗರುಡ । ಚರಿಸೆ ಕಾನನದಿ ಬಹ ಪಿತನ ॥ ಪರಿಕಿಸುತ ಕೆಳಗಿಳಿದು ಚರಣಕೆರಗಲು ಕಂಡು । ಶಿರವ ಪಿಡಿದೆತ್ತಿ ಸುತಗೆಂದ ॥೧॥ ಕ್ಷೇಮವೇ ಸುಕುಮಾರ ಭೂಮಿಯೊಳ್ಳಿನಗೆ ಜಠ । ರಾ ಮಹಾಗ್ನಿಯ ತಣಿಪ ಬಗೆಗೆ ॥ ಪ್ರೇಮದಾಹಾರ ಸತ್ಕ್ರಮದಿ ಸಿಗುವುದೆ ನಿತ್ಯ । ದೋಳ್ಮನಕೆ ಸುಖವೆ ಪೇಳೆನಗೆ ॥೨॥ ಅರುಣನೋಲ್ ಕುಶಲದಿಂದಿರುವೆ ಕೇಳ್ ಜನಕ ಪಡೆ । ದಿರುವಳೆನ್ನವ್ವೆ ಸಹ ಸುಖದಿ ॥ ಮರೆವಳಾದರು ದಾಹ ಹಸಿವೆಯನು ನೀಗಿಸಲು । ಸರಿಯಾಗಿ ತಿನಲು ಸಿಗದಿಹೆನು ॥೩॥ ಮಾತೆಯಳ ಬಂಧನ ವಿಮುಕ್ತಿಗೊಳಿಸಲು ಕದ್ರು । ಜಾತರೆಂದಂತಮೃತ ತರಲು ॥ ನಾ ತೆರಳಿ ಬಂದಾ ನಿಷಾಧ ಕುಲ ಭುಂಜಿಸಿದೆ । ಆತುರವು ಕಡೆ ಹೊಂದಲಿಲ್ಲ ॥೪॥ ಮುಂದೆ ಸುಧೆಯಂ ತರಲು ಎಂದೆಂದು ಹಸಿವಾಗ । ದೊಂದು ಆಹಾರ ಪೇಳೆನಗೆ ॥ ಚಂದದಿಂದೀ ಕೆಲಸ ಗೈದಪೆನೊ ಅಸದಳವೊ । ಯೆಂದರುಹೆನಲು ಕಂದಗೆಂದ ॥೫॥

ವಾರ್ಧಿಕ್ಯ

ತನಯ ಕೇಳೀ ಸರೋವರದ ನೀರ್ಗುಡಿಯೆ ತನು ।ವಿನ ದಾಹ ತೃಷೆ ಹಿಂಗುವುದು ಹಸಿವೆ ನೀಗಿಸಲು । ಘನತಪಸ್ವಿಗಳೀರ್ವರಾ ವಿಭಾವಸು ಸುಪ್ರತೀಕ ಸೋದರರಿಂದಿಗೆ ॥ ಜನುಮ ಭೂಮಿಯ ವ್ಯಾಜ್ಯದಿಂ ತಮ್ಮೊಳಗೆ ಶಾಪ । ವನು ತಾಳಿ ಕಚ್ಛಪ ಮಹಾ ಗಜದ ರೂಪದಿಂ।

Scanned by CamScanner

ದನಕವೀ ಸರಸಿಯಲಿ ಪೂರ್ವದ್ವೇಷವ ಬಿಡದೆ ಸಾಧಿಸುತ್ತಿಹರ ಪಿಡಿದು ॥೧॥ ತಿಂದು ಹಸಿವೆಂ
ಕಳೆದು ಅಮೃತವಂ ತಾರೆಂದು । ನಂದನನ ಹರಸಿ ಕಳುಹಲ್ಕೆ ಬಂದಾ ಗರುಡ । ನಂದ
ನೀರ್ಗುಡಿದು ಸಿಂಧೂರ ಕಚ್ಛಪಗಳಂ ಪಿಡಿದು ಕಾಲೆರಡರಿಂದ ॥ ಮುಂದ್ವರಿವುತಾಲ ವೃಕ್ಷದೊಳೆರ
ಕೊಂಬೆ ಮುರಿ । ದಂದದರ ಕೊಕ್ಕಿನಿಂ ಕಚ್ಚಿ ಹಿಮ ಗಿರಿಯೊಳಗೆ । ಬಂದಲ್ಲಿ ರೆಂಬೆಯಗ್ರದೊಳಿರ್ಪ
ವಾಲಖಿಲ್ಯರ ಬಿಟ್ಟು ಶರಣೆನ್ನುತ ॥೨॥

ಭಾಮಿನಿ

ಹರಕೆಯಂ ಕೈಗೊಂಡು ಕೂರ್ಮನ । ಬೆರಸುತಾನೆಯ ತಿಂದು ತಾನ । ಬ್ಬುರಿ
ಹೂಂಕರಿಸುತ್ತ ಗಗನದಿ ಹಾರಿ ತೆರಳುತಿರೆ ॥ ಮರ ಗಿರಿಗಳಲುಗಲ್ಕೆ ದಿವಿಜರು । ಪರಿಪರಿಯ
ಅಪಶಕುನ ಕಾಣುತ । ಭರಿತ ಭಯದೊಳಗಿಂದ್ರ ವಾಕ್ಪತಿಗೆರಗುತಿಂತೆಂದ ॥೧॥

ರಾಗ - ಮಧ್ಯಮಾವತಿ - ಏಕತಾಳ

ಸುರ ಗುರುವರ್ಯರ ಚರಣಕ್ಕೆ ಶರಣು । ಸುರ ಪುರದೊಳಗುತ್ಪಾತವು ತೋರ್ಪುದೇನು ॥
ಬಿರುಗಾಳಿ ಸಿಡಿಲು ಗರ್ಜನೆ ಉಲ್ಕಾಪಾತ । ಸುರಿವುದು ರಕ್ತ ವೃಷ್ಟಿಯು ನೋಡು ದಾತ ॥೧॥
ಸುರರಾಯುಧದಿ ಜ್ವಾಲೆ ಹೊರಹೊಮ್ಮುತಿಹುದು । ವರ ಶಸ್ತ್ರಾಸ್ತ್ರಗಳು ತಾವೇ ಸೆಣಸುವದು ॥
ಕೊರಳಿಗಿಕ್ಕಿದ ಸುಮ ಹಾರದ ಕಾಂತಿ । ಇರದಾಯ್ತು ನಮಗೆಲ್ಲ ಮನಕಿಲ್ಲ ಶಾಂತಿ ॥೨॥

ರಾಗ - ಕೇತಾರಗೌಳ - ಏಕತಾಳ

ಕೇಳಿರಯ್ಯ । ಸುಮನಸ । ರೇಳಿರಯ್ಯ ॥ಪ॥ ಕೇಳಿ ಕಶ್ಯಪ ಮುನಿ ಪಾಲ ವಿನತೆಯರ ।
ಬಾಲಕ ಗರುಡನು ಧಾಳಿಯಿಡುತ ಸುರ । ಜಾಲವ ಭಂಗಿಸಿ ಮೇಲಾದಮೃತವ ।
ಲೀಲೆಯೊಳೊಯ್ಯಲು ಬರುವ ಸೂಚನೆಯು ॥೧॥

ವಾರ್ಧಿಕ್ಯ

ಹಿಂದೆ ಪುತ್ರಾಧ್ವರಕೆ ವಾಲಖಿಲ್ಯರ ಕೂಡಿ । ಮುಂದೆ ಬಹ ಗರುಡನಯ್ಯನು ಸಮಿತ್ತುಗಳ
ತರ । ಲೆಂದಾಜ್ಞೆ ಕೊಡಲುಂಗುಟದ ಗಾತ್ರದಾ ಋಷಿಗಳೊಂದು ಕಡ್ಡಿಯ ಕಷ್ಟದಿ ॥ ನಿಂದು
ಬೀಳುತ್ತೆದ್ದು ತರುತಿರಲು ನೀನವರ । ನಿಂದಿಸಿದ ಕಾರಣದಿ ಪ್ರತಿ ಇಂದ್ರ ರೂಪದಿಂ । ಬಂದಿರ್ಪ
ಜನಿಸಿ ತಪ ಬಲದಿಂದ ಜಯ ಲಭಿಪ ಬಗೆಯರಿಯೆ ತಾನೆಂದನು ॥೧॥

ರಾಗ - ಭೈರವಿ - ಅಷ್ಟತಾಳ

ಗುರುವನು ಬೀಳ್ಕೊಡುತ । ಅಶ್ವಕ್ರಂದ । ಪ್ರರುಜ ರೇಣುಕರ ಮತ್ತಾ ॥ ಧುರಧೀರ
ಶ್ವಶನನಿಮೇಷ ಉಲೂಕರ । ಕರೆದೆಂದನೊಂದು ಮಾತ ॥೧॥ ರಣ ಯೋಧರಾಲಿಸಿರಿ ।
ಗರುಡನೆಮ್ಮ । ನನಿಮಿಷರುಗಳ ಮೀರಿ ॥ ಘನ ವಿಕ್ರಮದೊಳಮೃತಪಹರಣವ ಗೈವು । ದನು
ವಿಚ್ಚರದಿ ಕಾದಿರಿ ॥ ೨ ॥ ಎಂದೆಲ್ಲರಿಂಗಾಜ್ಞೆಯ । ಪಾಲಿಸುತ ನಾ । ಕೇಂದ್ರ ನಿರ್ಜರ ತತಿಯ ॥
ನಿಂದು ನಾಲ್ದೆಸೆಯಿಂದ ಕೊಂದು ಕೆಡಹಿರೆಂದು । ಮುಂದೆಚ್ಚರಿಕೆಯನಿತ್ತ ॥೩॥

ವಾರ್ಧಿಕ್ಯ

ಶಿಲೆ ಭೇದನದ ಹರಿತದಿಂದಗ್ನಿ ಚಕ್ರದಿಂ । ಬಳಿಕ ನೇತ್ರಾಸನದಿ ಹಗಲಿರುಳು ವಿಷ
ಸುರಿವ । ಬಲು ವೀರರಾಗಿರ್ಪ ಘಟ ಸರ್ಪಗಳನೆರಡ ಸುಧೆಗೆ ರಕ್ಷಣೆಯುಗೈದು ॥ ನೆಲೆಗೈದು
ವಿಶ್ವಕರ್ಮನ ದೂರದಿಂದ ಮ । ತ್ತೊಳಗೆ ಗಂಧರ್ವ ಸಾಧ್ಯರ ಪೂರ್ವದಲಿ ನಿಲಿಸಿ । ತಿಳಿದ
ವಸುರುದ್ರ ತೆಂಕಣದಿ ಉತ್ತರಕಶ್ವಿನೀ ದೇವತೆಯರಿಂಗೊರೆದು ॥೧॥

ಭಾಮಿನಿ

ಭಾನುವನು ಪಶ್ಚಿಮದಿ ನಿಲಿಸುತ । ಕಾಣದದೃಶನಾಗಿ ಸುರಪತಿ । ತಾನಿರಲು ವಿಹಗೇಂದ್ರ
ನಡೆತರಲಾಗ ಸುರಪುರಕೆ ॥ ಕಾಣುತಲಿ ನಿರ್ಜರರು ಬಲುತರ । ತ್ರಾಣದಿಂದಾಯುಧವನೆಸೆಯಲು ।
ಹಾನಿಗೊಳಿಸುತ ಗೆಲಲು ಕಂಡಾ ಮರುತ ತಡೆದೆಂದ ॥೧॥

ರಾಗ - ಭೈರವಿ - ಏಕತಾಳ

ನಿಲು ಹಾರಲು ಬಿಡೆ ಗರುಡ । ನಾ । ತಿಳಿದೆ ನೀ ಬರುವುದ ಗೂಢ ॥ ಬಲುಹಿಂ
ಸುಧೆಯೊಯ್ಯುವೆಯ । ಸುರ । ರೊಳು ಮರಣವ ಬಯಸುವೆಯ ॥೧॥ ಕೊಲ್ಲುವ ಮಾತಂತಿರಲಿ ।
ಸುರ । ರೆಲ್ಲ ಮುಳಿದು ನಡೆತರಲಿ ॥ ಬಲ್ಲಿದ ಬಲಯುತನಿಹೆನು । ಜಗ । ವೆಲ್ಲ ಕ್ಷಣದಿ
ಜೀರ್ಣಿಪೆನು ॥೨॥ ಚರಿಸದೆ ನಾನಿರೆ ನಿನ್ನ । ನಿಜ । ಹರಣವು ಉಳಿವುದೆ ಮುನ್ನ ॥ ಸುರರೊಳು
ವೈರವ ಬಿಟ್ಟು । ಹಿಂ । ದಿರುಗೆಲೊ ಹೋಗುವೆ ಕೆಟ್ಟು ॥೩॥ ಸುಧೆಯನ್ನೊಯ್ಯದೆ ಬಿಡೆನು ।
ಎನ । ಗಿದಿರಯ್ತುಹರ ಸದೆವೆನು ॥ ಬೆದರೆನೆನಲು ಮಾರುತನು । ಕಾ । ದಿದ ಶರಗಳನೆಸೆದವನು ॥೪॥

ಭಾಮಿನಿ

ಮರುತ ಶಿಖಿ ಯಮ ನಿಋತಿ ಮುಖ್ಯರ । ಧುರದಿ ಸೋಲಿಸಿ ಮೆರೆಯುತಿರೆ ನಿ । ರ್ಜರರು
ನಾನಾಸ್ತ್ರದಲಿ ಕಾದಲು ಬೆರಸಿ ಮುಂದ್ವರಿಯೆ ॥ ಮೆರೆವ ಸುಧೆಯಾವರಣದಂದದಿ । ತರ
ತರಾಯುಧದಿಂದ ನಿಂದಿಹ । ಭರಿತ ಬಲನಹ ವಿಶ್ವಕರ್ಮನು ಧುರಕೆ ಮಾರಾಂತ ॥೧॥

ರಾಗ- ಘಂಟಾರವ - ಅಷ್ಟತಾಳ

ಬಾರೆಲ ಕ್ಷುದ್ರ ಗೃಧ್ರ ಸ್ವರೂಪಿಯೆ । ವೀರ ನಿರ್ಜರ ವಾರ ಗೆಲಿದಿಹ । ಶೂರತನಗಳ
ತೋರೆಲ ॥೧॥ ವಿಶ್ವಕಾಧಾರ ಶಾಶ್ವತ ರೂಪನೆ । ಈಶ್ವರನ ತೇಜಸ್ವಿ ಸುಧೆಯಾ । ವಶ್ಯದಿಂದಲಿ
ಬಂದೆನ್ನ ॥೨॥ ಹರಿಯು ನಿರ್ಜರರಿಂಗಿತ್ತ ಅಮೃತವು । ಮರುಳು ಹಕ್ಕಿಯೆ ದೊರೆಯದ್ವೆ ಕಾ ।
ದಿರುವೆನಿಂದ್ರನ ಮಾತಿಗೆ ॥೩॥ ಇಂದ್ರ ವಾಗೀಂದ್ರ ವಿಹಗೇಂದ್ರ ಗೌರೀಶ । ರಿಂದು ತಡೆದರು
ನಿಂದು ಕಾದುತ । ಬಂದ ಕೆಲಸವ ಸಾಧಿಪೆ ॥೪॥ ಎನ್ನ ರಕ್ಷಣೆಯೊಳಗಿಹುದನ್ನು ನಾ । ನನ್ನ
ರಿಂಗೆಡೆಗೊಡೆನು ನಿನ್ನನು । ಮಣ್ಣಗೂಡಿಪೆ ನೋಡೆಲ ॥೫॥

ಕಂದ

ಶಕ್ತಿಯೊಳೆಚ್ಚಸ್ತ್ರಗಳಂ । ಭುಕ್ತಿಯಗೈದೆರಡು ಝಾಮ ಸೆಣಸುತ ವಿಹಗಂ ॥ ಯುಕ್ತಿಯೊಳಾ
ಧರೆಗೊರಗಿಸೆ । ಮತ್ತಾರೇಣುಕ ಬರುತ್ತಲಿದಿರಿಸುತೆಂದಂ ॥೧॥

Scanned by CamScanner

ರಾಗ - ಕಾಂಬೋದಿ - ಝಂಪೆತಾಳ

ಏನೆಲವೊ ಗರುಡ ಗೀರ್ವಾಣರನು ಗೆಲಲು ಮಹಿ । ಮಾನುಭಾವತ್ವ ಬಂದಿಹುದೆ ॥ ಕೋಣ ಬಲು ಕೊಬ್ಬಿದರೆ ಆನೆಗೆಣೆಯಾಗುವುದೆ । ಹೀನ ಪ್ರಾಣಿಯೆ ತೊಲಗೊ ಮೂಢ ॥೧॥ ಉತ್ತಮರು ಸುರರಹುದು ದೈತ್ಯರಾರ್ಭಟೆಗಳುಕಿ । ಪತ್ನಿಯರ ಸೌಭಾಗ್ಯ ಕಳೆದು ॥ ಎತ್ತೆತ್ತಲೋಡುತಿಹ ಸತ್ವಶಾಲಿಗಳೆಂಗೆ । ವ್ಯರ್ಥವ್ಯಾತಕೊ ಕದನ ಧೂರ್ತ ॥೨॥ ಅದನರಿತ್ತು ನೀನಿಂದು ಸುಧೆಯೊಯ್ಯಲಯ್ದಿಹೆಯ । ಉದರಾಗ್ನಿಗಾಗಿ ಪಾವಕನ ॥ ಮುದದಿ ತಿಂದಂತಹುದು ತುದಿಗಾಲಕಾಗಿ ಈ । ತ್ರಿದಶರಾಲಯ ಸರಿದೆಯೇನೈ ॥೩॥ ಮೇರು ಪರ್ವತಕೆ ಮೊನ ಸೂಜಿಯಿಂದಿರಿದರದು । ಜಾರುವುದೆ ಹದಿನಾಲ್ಕು ಲೋಕ ॥ ಸೂರೆಗೊಂಬಧಟು ಎನಗಿರ ಮಾತೆಯಳ ದಾಸ್ಯ । ತೀರಿಸಲ್ಕೊಯ್ವೆ ಸುಧೆ ಬಿಡೆನು ॥೪॥ ಸಾಧಿಸ್ಯೆ ನೀನೆಂದು ಕೈದುಗಳನೆಸೆಯೆ ಏನ । ತೋದ್ಭವನು ನಖ ಪಕ್ಕದಿಂದ ॥ ಕಾದಿ ಸೋಲಿಸಿ ಬಂದ ಆದಿತೇಯರನೆಲ್ಲ । ರಾ ದಿಗ್ದೆಸೆಗೆ ಓಡಿಸಿದನು ॥೫॥

ರಾಗ - ಶಂಕರಾಭರಣ - ಮಟ್ಟೆತಾಳ

ಬತ್ತೀಸಾಯುಧಗಳ ಪಿಡಿದಾದಿತ್ಯ ಸಾಧ್ಯರು । ಮತ್ತೆ ಗಂಧರ್ವಾದಿ ಯಕ್ಷ ಮೊತ್ತ ಮುತ್ತಲು ॥ ಉತ್ತರಾಧಿಪತಿಗಳೆಲ್ಲ ನಿತ್ತು ತರುಬಲು । ಸತ್ವದಿಂದ ಗೆಲಿದು ಅಮೃತದತ್ತ ಸರಲು ॥೧॥ ಎರಡು ಘಟಸರ್ಪಗಳು ಕಾರುತಿರಲು ಗರಳವ । ಹೊರಗೆ ಅಗ್ನಿ ಚಕ್ರ ತಿರುಗುತಿರಲು ಕಂಡವ ॥ ಸರಿಯಲಾಗದಾತ ಧೂಳನೆರಚಿ ಚಕ್ರಕೆ । ಎರಗಿ ಪುಡಿಯಗೈದನಾತ ನಿಮಿಷ ಮಾತ್ರಕೆ ॥೨॥

ಭಾಮಿನಿ

ಪಾದ ನಖದಿಂದೆತ್ತಿ ಕಲಶವ । ನಾದರದಿ ಸುಧೆ ಕುಡಿಯದಾತನು । ಮೋದದಿಂ ಮಾತೆಯಳ ಬಂಧನ ಬಿಡಿಪ ಕಾರ್ಯದಲಿ ॥ ಹಾದಿ ಪಿಡಿದಯ್ತರಲಿಕಿದಿರಿಗೆ । ಮಾಧವನು ನಡೆತರಲು ಕಂಡು ವಿ । ರೋಧಿಯೆಂಬಾ ಭಾವದಲಿ ಗರ್ಜಿಸುತಲಿಂತೆಂದ ॥ ೧ ॥

ರಾಗ - ಭೈರವಿ - ಏಕತಾಳ

ಯಾರೊ ಚತುರ್ಭುಜ ನೀನು । ನೆಗೆ । ಬೀರುತ ಬರುವದಿದೇನು ॥ ಸಾರುವ ಪಥಕಿದಿರಾಗಿ । ನೀ । ಹೋರಲು ಬಂದೆಯ ಸಾಗಿ ॥೧॥ ಸುರರಂ ಗೆಲಿದಮೃತವನು । ಸ । ತ್ವರ ದಿಂದೊಯ್ಯುವುದನ್ನು ॥ ಪರಿಕಿಸಲೆಂದಯ್ತಂದೆ । ಸಂ । ಗರವೆಂದರೆ ನಾ ಹಿಂದೆ ॥೨॥ ಆದಡೆ ನಿನಗೇನ್ ಕೆಲಸ । ಮ । ತ್ತಾದಿತೇಯರಿಗೆ ಸರಸ ॥ ಸಾಧಿಸಲಯ್ದಿಯ ಪೇಳು । ನೀ । ಕಾದಲು ಬಿಡೆ ಬೇಗೇಳು ॥೩॥ ಸ್ಥಿತಿಪತಿ ಹರಿ ತಾನಿಹೆನು । ಪದ । ನುತಿಪರ ಸಲಹುತ್ತಿಹೆನು ॥ ಖತಿಗೊಳ್ಳದೆ ನೀನೆನಗೆ । ಸಂ । ಸ್ತುತಿಸಿ ಬಾಳು ಏಳಿಗೆಗೆ ॥೪॥ ಅರಿತೆ ಸುರರ ಪೊರೆವಾತ । ಶ್ರೀ । ಹರಿ ನೀನೆಂಬುವ ಮಾತ ॥ ಭರಿತ ಬಲನು ನಾ ನಿನಗೆ । ಎರ । ಗಿರೆನು ನಮಿಸು ನೀನೆನಗೆ ॥೫॥

ರಾಗ - ಕೇತಾರಗೌಳ - ಅಷ್ಟತಾಳ

ವೀರ ನೀನೆಂದು ನಾನರಿತು ಬಂದಿಹೆ ಮೆಚ್ಚಿ । ಕಾರುಣ್ಯದಿಂ ವರವ ॥ ಓರಂತೆ ಬೇಕಾದುದನು ಕೇಳು ಕೊಡುವೆನು । ಬೇರೇನು ಯೋಚಿಸದೆ ॥೧॥ ಹದಿನಾಲ್ಕು ಲೋಕದೊಳಿದಿರಾರು

ಎನಗಿಲ್ಲ । ಬದಲ್ಯಾಕೆ ವರವೆನಗೆ ॥ ಕದನಕ್ಕೆ ಕೆದರುವ ಚದುರ ನಿನ್ನೇಳ್ಗೆಗೆ । ಮುದದಿ ಕೇಳಾ ನೀವೆನು ॥೨॥ ಆಗಲಿ ಮಾತೆಯಾಣೆಯನಿತ್ತು ನಂಬುಗೆ । ಈಗ ಪಾಲಿಸುಯೆನ್ನಲು ॥ ರೇಗಿ ಸಂತಸದಿ ಹರಿಗೆ ನಂಬಿಸುತ ನಿಲ್ಲ । ಲಾಗ ಗರುಡಗೆಂದನು ॥೩॥

ವಾರ್ಧಿಕ್ಯ

ಲೋಕ ಮೂರರೊಳೆನಗೆ ಇದಿರಿಲ್ಲವೆನುತಲು । ದ್ರೇಕಗೊಂಡಿಹೆ ಎನ್ನ ಆಜ್ಞೆಯಲಿ ಮುಂದಿನ್ನು । ಸಾಕಾರ ಭಕ್ತಿಯಲಿ ಸೇವಿಸುತ ವಾಹನಕೆ ನೆರವಾಗಿ ಬಾಳ್ಮದೆಂದ ॥ ಆ ಕರುಣ ಸಾಗರನ ಒಳಗಾದೆನಿದರಿಂದ । ಲೀ ಕೀರ್ತಿ ಶಾಶ್ವತವು ಜನನಿಯಾಶೀರ್ವಚನ । ವೀ ಕಾಲ ಕೈಸೇರಿತೆಂದು ಪಾದಕೆ ನಮಿಸಿ ನುತಿಸಿದಂ ವಿಧ ವಿಧದಲಿ ॥೧॥

ರಾಗ - ಪಂತುವರಾಳಿ - ರೂಪಕ ತಾಳ

ಕರುಣ ಶರಧಿ ಮುಕುತಿದಾಯಕ । ಲಕ್ಷ್ಮೀನಿವಾಸ । ಶರಣೋದ್ಧರಣ ಲೋಕನಾಯಕ ॥ ಬರಿದೆ ಗರ್ವವೊರೆದೆನೆಂದು । ಜರೆಯಬೇಡವಿನ್ನು ಮುಂದು । ವರ ನಿರೋಗ ದೀರ್ಘಕಾಯ । ವಿರುವ ತೆರದಿ ಹರಸು ಜೀಯ ॥೧॥ ಮಾತೆಯ ಬಂಧನ ವಿಮುಕ್ತಿಗೆ । ಕೊಂಡೊಯ್ವೆನಮೃತ । ವಾತುರದಲಿ ಕುಡಿಯದೊಮ್ಮೆಗೆ ॥ ಈ ತೆರ ಚಿರಾಯುವಾಗಿ । ಕೀರ್ತಿ ಸ್ಥಾನ ಶ್ರೇಷ್ಠನಾಗಿ । ಯಾತರ ಕುಂದಾಗದಂತೆ । ಮಾತಿದುಳುಹು ನೀನು ಮುಂತೆ ॥೧॥

ರಾಗ - ದೇಶಿ - ಏಕತಾಳ

ಕೇಳು ಪಕ್ಷಿರಾಜ । ನಿನ್ನೊಳು । ಪೇಳ್ವೆನಗ್ನಿ ತೇಜ ॥ ತೋಳಭಟನೆ ನಿ । ನ್ನಾಲೋಚನೆಗಳ । ಕೇಳಿಕೆ ನಿಶ್ಚಯ । ಪಾಲಿಪೆನಾದರು ॥ಪ॥ ನಿತ್ಯವೆನ್ನ ಕೆಳಗೆ । ಇರುವುದು । ಭಕ್ತಿ ತೋರುತೆನಗೆ । ಗಮನಕೆ । ಯುಕ್ತನಾಗಿ ಬಳಿಗೆ । ಬರುವುದು । ಸತ್ಯವಾಗಿ ನಿನಗೆ ॥ ಇತ್ತಪೆನುತ್ತಮ । ಸುಸ್ಥಾನವನೆ । ನ್ನುತ್ತಲಿ ಕಳುಹಿದ । ಪೃತ್ಯಗಾತ್ಮನನು ॥೧॥

ಕಂದ

ಹರಿಯನುಮತಿಯಿಂ ಪೊರಟಾ । ಗರುಡನಮೃತ ಕಲಶವೆತ್ತಿ ಕೊಂಡಯ್ತರಲುಂ ॥ ಮರೆಯೊಳಗಿಹ ಸುರಪಾಲಂ । ಧರಿಸಿ ಕುಲಿಶದಿಂ ವಿಭಾಡಿಸುತಲಿಂತೆಂದಂ ॥೧॥

ರಾಗ - ಮಾರವಿ - ಏಕತಾಳ

ಹದ ಮೀರಿದ ಖಗರಧಿಪನೆ ನಿಲು ನೀ । ಸುಧೆಯನ್ನಪಹರಿಸಿ ॥ ಮುದದಿಂದೊಯ್ಯಲು ತ್ರಿದಶಾಧಿಪ ಬಿಡೆ । ನಿದೊ ಜೈಸಲೊ ಸೆಣಸಿ ॥೧॥ ಬಿಡುಗಣ್ಣರು ಕಂಗೆಡುತೋಡಲು ನೀ । ನಡಗಿರ್ದೆಯ ಮೂರ್ಖ ॥ ತಡೆವೆಯ ಎನ್ನನು ಕಡೆ ಗಾಲವ ತೋ । ರ್ಪಡಿಸುವೆನೈ ಶಕ್ರ ॥೨॥ ಶರಧಿಯ ಮಥನದಿ ದೊರೆಯಲು ಶ್ರೀಹರಿ । ಕರೆದಿತ್ತನು ನಮಗೆ ॥ ಸುರರಿಗಿರುವ ಸುಧೆ ಕಲಶವನೊಯ್ಯಲು । ಮರುಳನೆ ಬಿಡೆ ನಿನಗೆ ॥೩॥ ಏನೊದರುವೆ ಮತಿ ಹೀನನೆನ್ನಧಟಿಗೆ । ಆ ನರಹರಿ ಯೊಲಿದು ॥ ಸ್ಥಾನವನಿತ್ತಿಹ ನೀನರಿಯದೆ ದು । ಮ್ಮಾನಕಿಳಿಯಬೇಡ ॥೪॥ ಪಕ್ಕಿಯೆ ನಿನ್ನಯ ರೆಕ್ಕೆಯ ಬಲ ಮುರಿ । ದಿಕ್ಕುವೆ ತಾನೆಂದು ॥ ಶಕ್ರನು ಕುಲಿಶದಿ ಲೆಕ್ಕಿಸದೆರಗಲು । ನಕ್ಕು ಗರುಡನೆಂದ ॥೫॥

Scanned by CamScanner

ವಾರ್ಧಿಕ್ಯ

ಒಂದು ಗರಿಯಂ ಕೀಳಲಸದಳವು ನಿನಗೆ ನಾ । ಕೇಂದ್ರ ಮೌನಿ ಧದೀಚಿ ಮೂಳೆಯಿಂದಾ ಸುರ । ವೃಂದದಾಯುಧ ವಜ್ರಕೀವೆ ಮನ್ನಣೆಯೆಂದು ಧರೆಗಿಟ್ಟ ಗರಿಯನೊಂದ ॥ ಬಂದ ಋಷಿವರರು ಕಂಡಾನಂದದಿಂದೆತ್ತಿ । ಚಂದವಂ ಬಣ್ಣಿಸಿ ಸುಪರ್ಣನೆಂದಾ ಖಗನ । ನಿಂದ ಪೊಗಳುತ್ತಿರಲು ಸುರಪನಚ್ಚರಿಯಿಂದ ಗರುಡನೊಡನಿಂತೆಂದನು ॥೧॥

ರಾಗ - ಸೌರಾಷ್ಟ್ರ - ತ್ರಿವುಡೆತಾಳ

ವಿಕ್ರಮಕೆ ಮೆಚ್ಚಿದೆ ವಿಹಂಗನೆ । ವ್ಯಕ್ತಿ ದ್ವೇಷವ ಮರೆದು ನಿನ್ನಯ । ಶಕ್ತಿಯೆಷ್ಟೆಂಬೊಳ್ವ ಪೇಳ್ವೆಯ । ಅರ್ಕರೂಪ ॥೧॥ ಮುಂದೆ ನಿನ್ನಯ ಮೈತ್ರಿಯನು ಬಿಡ । ದೆಂದು ಗಳಿಸುವ ಆಶೆಯೆನಗಿದೆ । ಯೆಂದೆನಲು ಸಂತೋಷದೊಳು ವಿಹ । ಗೇಂದ್ರನೆಂದ ॥೨॥

ರಾಗ - ಸಾಂಗತ್ಯ - ರೂಪಕತಾಳ

ಅನಿಮಿಷಾಧಿಪ ಕೇಳು ವನ ಗಿರಿ ಸಾಗರ । ವನು ಒಂದೇ ಪಕ್ಕದಿ ಹೊರುವೆ ॥ ಇನಿತೊಳಗೊಂಡ ಬ್ರಹ್ಮಾಂಡವೆಲ್ಲವ ಹೊತ್ತು । ಕುಣಿವೆ ಮತ್ತೊಂದು ಪಕ್ಕದಲಿ ॥೧॥ ಸರಸದಿ ಸುತ್ರಾಮನೊರೆದ ನಿನ್ನಯ ಮೈತ್ರಿ । ಕರುಣಿಸು ಸುಧೆಯಾತಕೊಯ್ವೆ ॥ ಧರೆಯೊಳು ಜನರಿದ ಕುಡಿಯೆ ಮತ್ತೆಮಗಿಲ್ಲಿ । ನಿರತ ಬಾಳಿರಗೊಡರಯ್ಯ ॥೨॥ ಕದ್ರು ಫಣಿಗಳಿಂದಲೆನ್ನವ್ವೆಗೊದಗಿದ । ಸದ್ಯ ದಾಸ್ಯ ವಿಮುಕ್ತಿಗಾಗಿ ॥ ಒಯ್ದು ನಿರ್ದಿಷ್ಟ ಜಾಗದೊಳಿರಿಸುವೆ ಬೇಕಾ । ಗಿದ್ದರೆ ತಹುದು ಯತ್ನದಲಿ ॥೩॥ ನಾಗ ಗಮನ ಸ್ನೇಹಕಾಗಿ ಗರುಡನನ್ನು । ಬೇಗನಪ್ಪುತ್ತಲಿಂತೆಂದ ॥ ಶ್ರೀ ಗುರು ನೀನಾದರೀವೆ ಕೇಳ್ ವರವೊಂದ । ನೀಗಲೆ ಕೊಡುವೆ ತಾನೆನಲು ॥೪॥ ಈಶ ನಾ ಸರ್ಪಕಾದರು ನಿನ್ನ ಹಿತಕಾಗಿ । ತೋಷದಿ ಕೇಳ್ವೆನು ಮುಂದೆ ॥ ಆ ಸರ್ಪಾಹಾರಿಯಾಗುವ ಹಾಗೆ ನೀಡೆನೆ । ವಾಸವನಸ್ತು ಪೋಗೆಂದ ॥ ೫ ॥

ರಾಗ - ಕಾಂಬೋದಿ - ಝಂಪೆತಾಳ

ಸುರಪಾಲನನುಮತಿಯ ಧರಿಸಿ ಮಾತೆಯ ಬಳಿಗೆ । ಸರಿದು ಸಕಲವ ತಿಳುಹುತಾಗ ॥ ಉರಗರನು ಕರೆದೆಂದ ಅರುಹಿದಂದದೊಳಮೃತ । ಕರುಣಿಸಿದೆ ನಾ ತಂದು ನಿಮಗೆ ॥೧॥ ನಿಮ್ಮ ಮುಂದೀ ದರ್ಭೆಯಲ್ಲಿರಿಪೆ ಕೊಳಿರಿಯೆ । ನ್ನಮ್ಮಗಿಹ ದಾಸ್ಯದ ವಿಮುಕ್ತಿ ॥ ಯಂ ಮಾಡಿರೆಂದರುಹೆ ವಿನತೆಯನು ಗರುಡನಿಗೆ । ಸಮ್ಮುಖದಿ ಬಿಟ್ಟುಕೊಟ್ಟಾಗ ॥೨॥ ಸುಧೆಯುಣಲು ಸ್ನಾನಾದಿ ಕರ್ಮ ಮುಗಿಸುವುದೆಂದು । ನದಿಗೆ ಪನ್ನಗರು ತೆರಳಲ್ಕೆ ॥ ತ್ರಿದಶೇಂದ್ರ ಸಮಯ ಸಾಧಿಸುತಮೃತ ಕುಂಭವನು । ಚದುರತನದಿಂದೊಯ್ದ ದಿವಕೆ ॥೩॥

ಕಂದ

ನಿತ್ಯಾಹ್ನಿಕವಂ ತೀರಿಸಿ । ಮತ್ತೆಲ್ಲಹಿಗಳು ಬರುತ್ತ ದರ್ಭೆಯೊಳಿಟ್ಟಿಹ ॥ ಪಾತ್ರೆಯ ಕಾಣದೆ ಮರುಗುತ । ಚಿತ್ತದಿ ಬೇಗುದಿಯ ತಾಳ್ದು ತಿಳಿದಿಂತೆಂದರ್ ॥೧॥

ರಾಗ - ಮಾಧ್ಯಮಾವತಿ - ಆದಿತಾಳ

ಮೋಸ ನಡೆಯಿತು । ದೇವೇಂದ್ರನಿಂದ । ಮೋಸ ನಡೆಯಿತು ॥ಪ॥ ಈಸು ಜನರೆಲ್ಲರು ಸಂ । ತೋಷದಿ ಸ್ನಾನಕ್ಕೆ ಪೋಗ । ಲಾ ಸಮಯ ಸಾಧಿಸುತ್ತ । ವಾಸವ ಕದ್ದೊಯ್ದನಯ್ಯ ॥ ಮೋಸ ॥೧॥ ಮರಣ ಹೊದ್ದಲಾಗದೆಂದು । ಗರುಡನಿಂದ ಅಮೃತ ತರಿಸಿ । ದೊರೆಯದಾಯ್ತು ಬಾಯಿಗೀಗ । ಅರುಹುವದಿನ್ನಾರಿಗಿದರ ॥ ಮೋಸ ॥೨॥ ವಿನತೆಯ ದಾಸ್ಯ ವಿಮುಕ್ತಿ । ಯನು ಸುಪರ್ಣಗೈದ ದಣಿದು । ಹನನವೆಸಗಲೆಣಿಸಿಹೆತ್ನ । ಅನಿಮಿಷೇಂದ್ರ ಹಾಳೆಸಗಿದ ॥ ಮೋಸ ॥೩॥

ವಾರ್ಧಿಕ್ಯ

ದರ್ಭೆಯೊಳಗಿರಿಸಿದಮೃತದ ಕಾಂಕ್ಷೆಯಿಂದದಕೆ । ಪರ್ಬಿರಲು ಬಹುದೆಂದು ಎಣಿಸುತ ಭುಜಂಗಮರು । ಉಬ್ಬುತೆಲ್ಲರು ಜಿಹ್ವೆಯಿಂದ ಪೂಸಲು ಸಕಲರಿಂಗೆ ಸೀಳಾಗಲಾಗ ॥ ಅಬ್ಬರಿಸಿ ವಿಷವ ಕಾರುತ್ತ ಕೊಲುವವರಿನ್ನು । ಉರ್ಬಿಯೊಳಗಿಲ್ಲೆಂದು ಬಲವಂತ ಗರುಡನಂ । ಇಬ್ಭಾಗವೆಸಗಿ ಕೊಲ್ಲುವದೆಂದು ನಾಲ್ದೆಸೆಗೆ ಮುತ್ತಿದರು ಗರ್ವದಿಂದ ॥೧॥

ರಾಗ - ಶಂಕರಾಭರಣ - ಮಟ್ಟೆತಾಳ

ಸುಧೆಯ ಕಲಶ ತೋರಿ ನಮ್ಮ । ಮುದದಿ ಮರುಳು ಮಾಡಿ ತಾಯ । ಚದುರತನದಿ ಬಿಡಿಸಿಕೊಂಡ । ಅಧಟುತನವನು ॥ ಕದನದಲ್ಲಿ ಕಾಂಬೆವೀಗ । ಅಧಿಕ ವಿಕ್ರಮಂಗಳಿರಲು । ಇದಿರಿನಲ್ಲಿ ತೋರು ಯಮನ । ಸದನ ತೋರ್ಪೆವು ।೧। ಜನನಿಯನ್ನು ದಣಿಸಿ ಎನ್ನ । ನಿನಿತು ಬಳಲಿಸಿರುವ ನಿಮ್ಮ । ಹಣೆಯ ಬರಹ ತೀರಿಸುವೆನು । ಗರಳ ಜೀವರೆ ॥ ಕುಣಿದು ಸುಧೆಯ ಕಲಶವಿಟ್ಟ । ತೃಣವ ಸವರಿ ಜಿಹ್ವೆಯನ್ನು । ಇನಿತು ಸೀಳೆಸಗುತ ಮಲೆತು । ಧುರಕೆ ಬಂದಿರೆ ॥೨॥

ರಾಗ - ಭೈರವಿ - ಅಷ್ಟತಾಳ

ಹಿಂದೆ ನಮ್ಮೆಲ್ಲರನು । ಹೊತ್ತೊಯ್ದಿನ । ನಿಂದ ಸುಡಿಸುತ ನೀನು ॥ ಅಂದು ಕೊಲ್ಲುವ ಕಾರ್ಯವಿಂದ್ರನಿಂದುಳಿದೆವು । ಇಂದು ಬಿಡೆವು ನಿನ್ನನು ॥೧॥ ಹಗೆ ನಿಮಗಿರುವದೆಂದು । ವರವನಿತ್ತ । ನಗವೈರಿ ಯೆನಗಿದೊಂದು ॥ ಮಿಗೆ ನಿತ್ಯದಾಹಾರವಾಗಿ ಫಣಿಗಳೆಲ್ಲ । ಜಗದಿ ಬಾಳಿರಲಿ ಯೆಂದು ॥೨॥ ಅರಿತೆವು ಅಮೃತವನು । ಇಂದ್ರನು ಒಯ್ಯ । ಲಿರುವ ಕಾರಣ ಕರ್ತನು ॥ ಗರುಡ ನಿನ್ನಯ ಮೈತ್ರಿ ಹೊರತು ಬೇರಿಲ್ಲೆಂದು । ತರುಬಿದರಾತನನು ॥೩॥

ವಾರ್ಧಿಕ್ಯ

ಗರುಡನೊಬ್ಬೊಬ್ಬರಂ ಪಿಡಿದು ತಿನುತಿರಲಾಗ । ಭರಿತ ಭೀತಿಯೊಳುಳಿದ ನಾಗಗಳು ಉಳಿಗಾಲ । ದೊರೆಯದೆಮಗೆಂದೆನುತ ಬಿಲಹೊಕ್ಕು ಪಾತಾಳದಲ್ಲಿ ನೆಲಸಿರ್ದರೆಲ್ಲ ॥ ಸುರಪನೊಯ್ದಮೃತವಿರಿಸಿದ ತೃಣಕೆ ಸಪ್ತಋಷಿ । ವರರೆಂದರಾ ಪವಿತ್ರವು ಯೆಂಬ ಪೆಸರಿಂದ । ಧರೆಯೊಳಿರಲೆಂದರುಹೆ ನಭದಿಂದ ಸುರವಾದ್ಯ ಭೇರಿಗಳು ಮೊಳಗುತಿರಲು ॥೧॥

Scanned by CamScanner